Advocacy, policy and support on male sexualities
Naz Foundation International

# ಅಭಿವೃದ್ಧಿ ಕೈಪಿಡಿ

ಪುರುಷ-ಪುರುಷ ಲೈಂಗಿಕರು, ಅವರ ಸಂಗಾತಿಗಳು ಹಾಗು ಕುಟುಂಬದವರ, ಎಚ್ ಐ ವಿ / ಏಡ್ಸ್, ಲೈಂಗಿಕ ಆರೋಗ್ಯ, ಕ್ಷೇಮಾಭಿವೃದ್ಧಿ ಮತ್ತು ಮಾನವ ಹಕ್ಕು ಸಮಸ್ಯಗಳನ್ನು ಸಂಭೋಧಿಸಲು ಸಮುದಾಯ ಆಧರಿತ ಸಂಘಟನೆಗಳ ಅಭಿವೃದ್ಧಿ.

## ಪುಸ್ತಕ 1
## ಪರಿಚಯ



### ಸಮರ್ಪಣೆ

ಏಡ್ಸ್‌ನಿಂದಲೇ ಮೃತಪಟ್ಟ ಮತ್ತು ಆರೈಕೆ ಇಲ್ಲದ ಎಲ್ಲ ನತದೃಷ್ಟರಿಗೆ, ಅವರ ಪೋಷಕರು ಹಾಗೂ ಕುಟುಂಬ ವರ್ಗದವರಿಗೆ ಈ ಸರಣಿ ಪುಸ್ತಕಗಳನ್ನು ಸಮರ್ಪಿಸಲಾಗಿದೆ.


### ಕೃತಜ್ಞತೆಗಳು

ಸಾಮಾಜಿಕ ಮತ್ತು ಅಗತ್ಯ ಪರಿಗಣನೆಗಳು, ಲೈಂಗಿಕ ಆರೋಗ್ಯ ಯೋಜನೆಗಳು, ಸಂದರ್ಶನಗಳು, ಕಾರ್ಯಾಗಾರಗಳಲ್ಲಿ ಭಾಗವಹಿಸಿ ಅವರ ಪೋಷಕರನ್ನು ಭೇಟಿಯಾಗಿ ಸಂದರ್ಶನ ನಡೆಸಿದವರಿಗೆ, ಪ್ರಮಾಣಿಕವಾಗಿ, ಮುಕ್ತವಾಗಿ ಮತ್ತು ಸ್ನೇಹದಿಂದ ಅನುಭವಗಳನ್ನು ಹಂಚಿಕೊಂಡವರಿಗೆ, ಪಾರ್ಕ್‌ಗಳಲ್ಲಿ ಹಾಗೂ ಹೋಟೆಲ್ ಲಾಬಿಗಳಲ್ಲಿ ತಮ್ಮ ಕತೆಗಳನ್ನು ತಾಳ್ಮೆಯಿಂದ ಹೇಳಿದವರಿಗೆಲ್ಲ ನಮ್ಮ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇವೆ. ಪುರುಷರ ಜೊತೆ ಲೈಂಗಿಕ ಕ್ರಿಯೆ ನಡೆಸುವ ಪುರುಷರಿಗಾಗಿ ಬರೆಯಲ್ಪಟ್ಟ ಕೈಪಿಡಿಯಲ್ಲಿ ವ್ಯಕ್ತಪಡಿಸಲಾದ ಅಗತ್ಯತೆಗಳಿಗೆ ಪೂರಕವಾದ ಅಭಿವೃದ್ಧಿಯ ಸೂಕ್ತ ಸೇವೆಗಳ ಸವಾಲುಗಳನ್ನು ಸಲ್ಲಿಸಲು ಇಚ್ಛಿಸುತ್ತೇವೆ. ಅವರಿಲ್ಲದೆ ಇದು ಸಾಧ್ಯವಾಗುತ್ತಿರಲಿಲ್ಲ.

ಈ ಸಂಪನ್ಮೂಲವನ್ನು ಇನ್ನಷ್ಟು ಉತ್ತಮಗೊಳಿಸಲು ಆರ್ಥಿಕ ಸಹಕಾರ ಮತ್ತು ಪ್ರೋತ್ಸಾಹ ನೀಡಿದ 'UNAIDS' ಗೂ ಸಹ ನಾವು ಕೃತಜ್ಞತೆ ಸಲ್ಲಿಸಲು ಬಯಸುತ್ತೇವೆ.

ನಾಜ್ ಫೌಂಡೇಷನ್ ಇಂಟರ್‌ನ್ಯಾಷನಲ್

### ಪ್ರಕಟಣೆ ಮಾಹಿತಿ

ಪ್ರಕಟಣೆ : ನಾಜ್ ಫೌಂಡೇಷನ್ ಇಂಟರ್‌ನ್ಯಾಷನಲ್ 2005


ನಾಜ್ ಫೌಂಡೇಷನ್ ಇಂಟರ್‌ನ್ಯಾಷನಲ್ 2005

ಈ ಪುಸ್ತಕ, ಮತ್ತು ಸರಣಿಯ ಉಳಿದ ಪುಸ್ತಕಗಳನ್ನು www.nfi.net ಅಥವಾ ಕೆಳಕಂಡ ನಮ್ಮ ಭಾರತದ ಕಚೇರಿಯಿಂದ ಪಡೆಯಬಹುದು. ಹೆಚ್ಚುವರಿ ಭಾಷೆಗಳ ಆವೃತ್ತಿಗಳು ಲಭ್ಯವಿದೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ ಸಂಪರ್ಕಿಸಿ.


### ನಾಜ್ ಫೌಂಡೇಷನ್ ಇಂಟರ್ ನ್ಯಾಷನಲ್

ದಕ್ಷಿಣ ಏಷ್ಯಾ ಪ್ರಾದೇಶಿಕ ಕಚೇರಿ
9 ಗುಲ್ಜಾರ್ ಕಾಲೋನಿ, ನ್ಯೂ ಬೆರ್ರಿ ಲೈನ್
ಲಕ್ನೋ - 226 001, ಭಾರತ
ದೂರವಾಣಿ : + 91 (0) 552 2205781 / 2
ಫ್ಯಾಕ್ಸ್ : + 91 (0) 522 2205783
ಈ-ಮೇಲ್ : lucknow@nfi.net

## ಪುಸ್ತಕ – 1 ಪರಿಚಯ

### ವಿಷಯಗಳು

: ಪುಟ

1. ಸರಣಿಯ ಪರಿಚಯಗಳು

3. ನಾಜ್ ಫೌಂಡೇಶನ್ ಅಂತರ ರಾಷ್ಟ್ರೀಯ ಪ್ರತಿಷ್ಠಾನದ ಬಗ್ಗೆ ಮಾಹಿತಿ.

5. ನಾಜ್ ಫೌಂಡೇಶನ್ ಅಂತರರಾಷ್ಟ್ರೀಯ ಪ್ರತಿಷ್ಠಾನದ ಉದ್ದೇಶಗಳು.

7. ಸಂಕ್ಷಿಪ್ತ ಪದಗಳ ಉಪಯೋಗಿಸಿರುವ ಸರಣಿ.

11. ಲೈಂಗಿಕತೆ ಮತ್ತು ದಕ್ಷಿಣ ಏಷಿಯಾದಲ್ಲಿ ಲೈಂಗಿಕ ಆರೋಗ್ಯ ಸೈದ್ಧಾಂತಿಕ ಚೌಕಟ್ಟು

20. ಹೆಸರಿನಲ್ಲಿ ಏನಿದೆ? ಸೂಕ್ತ ಪದ ಬಳಕೆ.

23. ನಾಜ್ ಫೌಂಡೇಶನ್ ಅಂತರ ರಾಷ್ಟ್ರೀಯ ಪ್ರತಿಷ್ಠಾನದ ನೈತಿಕ ಹೇಳಿಕೆ.

28. ನಾಜ್ ಫೌಂಡೇಶನ್ ಅಂತರ ರಾಷ್ಟ್ರೀಯ ಪ್ರತಿಷ್ಠಾನದ ಲೈಂಗಿಕ ಆರೋಗ್ಯ ಕಾರ್ಯಕ್ರಮಗಳ ಬಗೆಗಿನ ಪ್ರಕ್ರಿಯೆ ಮಾದರಿ.

30. ಈ ಸರಣಿ ಪುಸ್ತಕದ ಮೂಲೆಯಲ್ಲಿ ಬಳಸಲಾದ ಪದಗಳ ಅರ್ಥ ವಿವರಣೆ.

32. ಕೃತಜ್ಞತೆಗಳು

# ಪರಿಚಯ

**ಸರಣಿ ಪರಿಚಯ :**

ಪುರುಷರ ಜತೆ ಲೈಂಗಿಕ ಕ್ರಿಯೆ ನಡೆಸುವ ಪುರುಷರ ಮೇಲೆ ಪರಿಣಾಮ ಉಂಟುಮಾಡುವ ವಿಷಯಗಳ ಬಗ್ಗೆ ಬೆಳಕು ಚೆಲ್ಲುವ ಸಮುದಾಯ ಆಧರಿತ ಸಂಘಟನೆಗಳ ಪ್ರಾಯೋಗಿಕ ರಚನೆ ಮತುತಿ ಹಂತಹಂತದ ಕ್ರಮದ ಮಾಹಿತಿ ಒದಗಿಸುವ ಕೈಪಿಡಿ ಸರಣಿಯಲ್ಲಿ ಇದು ಪ್ರಥಮ ಪುಸತಿಕ. ಎಂ ಎಸ್ ಎಂ ಗಳಿಗೆ ಕಾರಣವಾಗುವ ಅಂಶಗಳ ಕುರಿತು ನಾಜ್ ಅಂತರಾಷ್ಟ್ರೀಯ ಪ್ರತಿಷ್ಠಾನವು ದಕ್ಷಿಣ ಏಷಿಯಾದಲ್ಲಿ ನಡೆಸಿದ ವ್ಯಾಪಕ ಅಭಿವೃದ್ಧಿ ಕಾರ್ಯಗಳಿಂದಾಗಿ ಈ ಕೈಪಿಡಿ ಮೂಡಿಬಂದಿದೆ. ಪುರುಷರ ಜತೆ ಪುರುಷರು ನಡೆಸುವ ಲೈಂಗಿಕ ಕ್ರಿಯೆಗಳ ಪರಿಣಾಮದ ಬಗ್ಗೆ 1996 ರಿಂದ ಸರಣಿಯಲ್ಲಿರುವ ಮಾದರಿ ವಿವರಗಳನ್ನು 30 ರೂ ಹೆಚ್ಚು ಯೋಜನೆಗಳನ್ನು ಅಭಿವೃದ್ಧಿ ಪಡಿಸಲು ಬಳಸಲಾಗಿದೆ. ಎಲ್ಲ ಎಂ ಎಸ್ ಎಂ ಗಳಿಗೆ ಸೂಕತಿ ಲೈಂಗಿಕ ಆರೋಗ್ಯ, ಎಚ್ ಐ ವಿ / ಏಡ್ಸ್ ನಿಯಂತ್ರಣ, ಸುರಕ್ಷತೆ, ಮತುತಿ ಕಕ್ಷೆಮಾಭಿವೃದ್ಧಿ ಸೇವೆಗಳು ದೊರೆಯುವಂತಾಗಲು, ಇನ್ನೂ ಹೆಚ್ಚಿನ ಅಭಿವೃದ್ಧಿ ಸಾಧಿಸಲು ಈ ಹೊಸ ವಿಧಾನ ನೆರವಾಗಲಿದೆ ಎಂದು ನಾವು ಆಶಿಸುತ್ತೇವೆ.

**ಸರಣಿ :**

ಈ ಕೈಪಿಡಿಗಳ ಸರಣಿಗಳು ಪುರುಷ - ಪುರುಷ ಲೈಂಗಿಕರೊಂದಿಗೆ ಕಾರ್ಯ ನಿರ್ವಹಿಸುತ್ತರುವವರಿಗೆ ಸಮುದಾಯ ಆಧರಿತ ಪುರುಷ ಲೈಂಗಿಕ ಆರೋಗ್ಯ ಕಾರ್ಯಕ್ರಮಗಳನ್ನು ಅಭಿವೃದ್ಧಿ ಪಡಿಸುವತ್ತ ಸಮಗ್ರ ಮಾರ್ಗದರ್ಶನ ಹಾಗು ಸಾಧನ ಸಲಕರಣೆ ಒದಗಿಸುತ್ತವೆ.

ಇದನ್ನು ಪುರುಷ - ಪುರುಷ ಲೈಂಗಿಕರನ್ನು ಗಮನದಲ್ಲಿರಿಸಿ ಅವರಿಗೆಂದೇ ನಿರ್ದಿಷ್ಟವಾಗಿ ಅದರಲ್ಲೂ ಅಲ್ಪ ಆದಾಯಿ ಕಾರ್ಯ ಜಾಲಗಳ ಎಂ ಎಸ್ ಎಂ ಗಳು ಹೆಣ್ಣನ ಆರೋಪಿಸಿಕೊಂಡ ಪುರುಷರು - ಅಂದರೆ ಕೋತಿಗಳಿಗಾಗಿ ವಿನ್ಯಾಸಗೊಳಿಸಲಾಗಿದೆ. ಇದು ಸ್ವಸಹಾಯ ಹಾಗು ಸಹವರ್ತಿ ಶಿಕ್ಷಣವನ್ನು ಆಧರಿಸಿದೆ. ತರಬೇತು ಹೊಂದಿದ ಎಂ ಎಸ್ ಎಂ ಗಳನ್ನು ಇತರರನ್ನು ತರಬೇತುಗೊಳಿಸಲು ಹಾಗು ತಮ್ಮದೇ ಸ್ವಂತ ಸೇವೆಗಳನ್ನು ಹೊಂದಲು ತರಬೇತಿ ಪಡೆದವರನ್ನೇ ಬಳಸುವುದನ್ನು ಆಧರಿಸಿದೆ.

ಒಮ್ಮೆ ತರಬೇತು ಹೊಂದಿದರೆ, ಸೂಕ್ತ ಸೇವೆ ಅಭಿವೃದ್ಧಿ ಪಡಿಸಿಕೊಂಡರೆಂದರೆ, ಈ ಪ್ರಮುಖ ವ್ಯಕ್ತಿಗಳನ್ನು ತಮ್ಮಂತೆಯೇ ಇರುವ ಇತರರನ್ನು ಸಂಪರ್ಕಿಸುತ್ತಾರೆ. ಹಾಗೂ ಅವರ ಸಂಗಾತಿಗಳನ್ನು ತಲುಪಿ ಮತ್ತು ಪುರುಷ ಲೈಂಗಿಕರ ಲೈಂಗಿಕ ವರ್ತನೆಯ ನತಿಶೀಲತೆಯ ಚಿತ್ರಣ ಪಡೆಯಲು ಕೂಡ

ಉಪಯೋಗವಾಗುತ್ತದೆ. ಅಲ್ಲದೇ ಸಮಗ್ರ ಪುರುಷ ಲೈಂಗಿಕ ಆರೋಗ್ಯ ಕಾರ್ಯಕ್ರಮ ನಿರ್ಮಿಸಲು ಕೂಡ ಸಹಾಯವಾಗುತ್ತದೆ.

**ಈ ಸರಣಿ ಆರು ಪುಸ್ತಕಗಳನ್ನು ಹೊಂದಿದೆ**

| | | |
|---|---|---|
| ಪುಸ್ತಕ ಒಂದು | : | ಪರಿಚಯ |
| ಪುಸ್ತಕ ಎರಡು | : | ಹಿನ್ನಲೆ ಸಂದರ್ಭ ರೂಪಿಸುವಿಕೆ |
| ಪುಸ್ತಕ ಮೂರು | : | ಮೊದಲ ಹಂತ ಸಾಮಾಜಿಕ ಮತ್ತು ಅಗತ್ಯಗಳ ಮಾಪನ |
| ಪುಸ್ತಕ ನಾಲ್ಕು | : | ಎರಡನೇ ಹಂತ ಪುರುಷರ ಜೊತೆ ಲೈಂಗಿಕ ಕ್ರಿಯೆನಡೆಸುವ ಪುರುಷರ ಲೈಂಗಿಕ ಆರೋಗ್ಯ ಯೋಜನೆ ಅನುಷ್ಠಾನ |
| ಪುಸ್ತಕ ಐದು | : | ನಿರ್ವಹಣಾ ಪರಿಕರಗಳು |
| ಪುಸ್ತಕ ಆರು | : | ಇತರ ಸಂಪನ್ಮೂಲಗಳು |

ನಾಜ್ ಅಂತರಾಷ್ಟ್ರೀಯ ಪ್ರತಿಷ್ಠಾನ ನಡೆಸಿದ ಅನೇಕ ಕಾರ್ಯಗಾರಾಗಳಿಂದ ಸಿದ್ಧಪಡಿಸಲಾದ ವೇಳಾಪಟ್ಟಿ ಹಾಗೂ ಕಾರ್ಯ ಸೂಚಿಯ ಸವಿವರಗಳು ಅನುಸರಣೆಯನ್ನು ಕಾರ್ಯಗಾರಗಳು ಸೂಚಿಸುತ್ತವೆ. ಎಚ್ ಐ ವಿ / ಏಡ್ಸ್, ಸಮುದಾಯ ಆಧರಿತ ಕಾರ್ಯ, ಅಥವಾ ಲೈಂಗಿಕ ಆರೋಗ್ಯವರ್ಧನೆ ನಡೆಸುವ ಹಿನ್ನೆಲೆಯನ್ನು ಅರ್ಥೈಸಿಕೊಳ್ಳುವ ಬಗ್ಗೆ ಬಹುತೇಕರಿಗೆ ಅನುಭವ ಇಲ್ಲದಿರುವುದನ್ನು ಗುರುತಿಸಲಾಗಿದೆ. ಆದಾಗ್ಯೂ, ಇಂಥ ವೇಳಾಪಟ್ಟಿಗಳು ಮತ್ತು ಕಾರ್ಯ ಸೂಚಿಗಳನ್ನು ಅಗತ್ಯವಿದ್ದಾಗ ತಿದ್ದುಪಡಿ ಮಾಡಲಾಗುವುದು.

ಎನ್ ಎಫ್ ಐ, ಎಂ ಎಸ್ ಎಂ, ಲೈಂಗಿಕ ಆರೋಗ್ಯ ಕಾರ್ಯಕ್ರಮಗಳ ಅಭಿವೃದ್ಧಿಯನ್ನು ಅನುಷ್ಠಾನಗೊಳಿಸಲು ತನ್ನದೇ ಆದ ತರಬೇತು ಹೊಂದಿದ ತರಬೇತುದಾರರನ್ನು ಬಳಸುತ್ತದೆ. ಈ ಸಂಪನ್ಮೂಲ ಬಳಸಲು ಬಯಸುವವರು, ಕಾರ್ಯ ಪ್ರವೃತ್ತರಾಗುವುದಕ್ಕು ಮುನ್ನ ಎಂ ಎಸ್ ಎಂ ನಡೆವಳಿಕೆಗಳು, ಅಸ್ತಿತ್ವ ಲೈಂಗಿಕತೆ ಮತ್ತು ಪುರುಷತ್ವದ ಬಗೆಗಿನ ಪ್ರಾಯೋಗಿಕ ದೃಷ್ಟಿಕೋನ, ಭಾಷೆ ಹಾಗೂ ಚೌಕಟ್ಟಿನ ಆಳ ಅಗಲದ ಬಗ್ಗೆ ಚೆನ್ನಾಗಿ ತಿಳಿದುಕೊಂಡಿರಬೇಕು.

**ನಾಜ್ ಅಂತಾರಾಷ್ಟ್ರೀಯ ಪ್ರತಿಷ್ಠಾನದ ಬಗ್ಗೆ ಮಾಹಿತಿ :**

ನಾಜ್ ಅಂತಾರಾಷ್ಟ್ರೀಯ ಪ್ರತಿಷ್ಠಾನ ಒಂದು ಸರ್ಕಾರೇತರ ಸಂಸ್ಥೆ, ಪುರುಷರೊಂದಿಗೆ ಲೈಂಗಿಕತೆ ಹೊಂದುವ ಪುರುಷರ ಲೈಂಗಿಕ ಆರೋಗ್ಯದ ಸುಧಾರಣೆ, ಕ್ಷೆಮಾಭಿವೃದ್ಧಿ ಮತ್ತು ಮಾನವ ಹಕ್ಕುಗಳ ಬಗ್ಗೆ ಮಾಹಿತಿ ನೀಡಿ ಸೂಕ್ತಗೊಳಿಸುವುದು. ಕೇವಲ ಪುರುಷರೊಂದಿಗೆ ಲೈಂಗಿಕ ಸಂಪರ್ಕ (ಎಂ ಎಸ್ ಎಂ) ಹೊಂದಿದವರಿಗಷ್ಟೆ ಅಲ್ಲದೇ ಅವರ ಸಂಗಾತಿಗಳು ಕುಟುಂಬಗಳ ಸುಧಾರಣೆ ಕೂಡ ಈ ಪ್ರತಿಷ್ಠಾನದ ಉದ್ದೇಶ. ಈ ಸಮುದಾಯಗಳವರಿಗೆ ಅವರ ಲೈಂಗಿಕ ಆರೋಗ್ಯ, ಅವರ ಕ್ಷೇಮ ಮತ್ತು ಮಾನವ ಹಕ್ಕುಗಳ ಬಗ್ಗೆ ಸೂಕ್ತ ಮಾಹಿತಿ ನೀಡುವ ಮೂಲಕ, ನೀತಿ ರೂಪಣೆ, ಹಾಗು ಅಭಿವೃದ್ಧಿ ಕೇಲ ದೇಶಗಳಲ್ಲಿನ ಈ ಸಮುದಾಯ ಜಾಲಗಳು, ಗುಂಪುಗಳು ಮತ್ತು ಸಂಸ್ಥೆಗಳಿಗೆ ತಾಂತ್ರಿಕ, ಆರ್ಥಿಕ ಹಾಗು ಸಾಂಸ್ಥಿಕ ಬೆಂಬಲ ಒದಗಿಸುವ ಮೂಲಕ ಅವರಿಗೆ ಬಲ ನೀಡುವ ಕೆಲಸ ಮಾಡುತ್ತಿದೆ.

ಪುರುಷ ಲೈಂಗಿಕತೆ ಮತ್ತು ಅವರ ಲೈಂಗಿಕ ಅಭ್ಯಾಸಗಳು, ಮತ್ತು ಆರೋಗ್ಯ, ಕ್ಷೇಮ ಹಾಗು ಮಾನವ ಹಕ್ಕುಗಳ ಬಗೆಗಿನ ಸಮಸ್ಯೆಗಳ ಕುರಿತು ಈ ಮಾಹಿತಿ ಒದಗಿಸಿ ಅದಕ್ಕೆ ತಕ್ಕ ಪರಿಹಾರ ಒದಗಿಸುವ ಭರವಸೆಯನ್ನು ಈ ಸಂಸ್ಥೆ ಅಭಿವೃದ್ಧಿ ಶೀಲ ದೇಶಗಳಲ್ಲಿ ಮಾಡಿಸುತ್ತಿದೆ. ತನ್ಮೂಲಕ ಎಚ್ ಐ ವಿ / ಏಡ್ಸ್, ಲೈಂಗಿಕ ಆರೋಗ್ಯ, ಕ್ಷೇಮಾಭಿವೃದ್ಧಿ ಹಾಗು ಮಾಡುವ ಹಕ್ಕುಗಳ ಸೇವೆಗಳನ್ನು ಒದಗಿಸುತ್ತಿದೆ.

ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ನಾಜ್ ಅಂತರಾಷ್ಟ್ರೀಯ ಪ್ರತಿಷ್ಠಾನವು ಸ್ಥಳೀಯ ಸ್ವಸಾಹಯ ಲೈಂಗಿಕ ಕಾರ್ಯಜಾಲಗಳಿಗೆ, ಸಮೂಹಗಳಿಗೆ ಮತ್ತು ಸಂಸ್ಥೆಗಳಿಗೆ ತಾಂತ್ರಿಕ ಸಹಕಾರ ಮತ್ತು ಸಾಮರ್ಥ್ಯ ನಿರ್ಮಾಣ ಒದಗಿಸುತ್ತಿದೆ. ತನ್ಮೂಲಕ ಅವು ಸಮುದಾಯ ಆಧಾರಿತ ಹಾಗು ಫಲಾನುಭವಿ ನೇತೃತ್ವದ ಎಚ್ ಐ ವಿ / ಏಡ್ಸ್, ಲೈಂಗಿಕ ಆರೋಗ್ಯ, ಕ್ಷೇಮ ಮತ್ತು ಮಾನವ ಹಕ್ಕುಗಳ ಸೇವೆಗಳು ಅಭಿವೃದ್ಧಿ ಮಾಡಿಕೊಳ್ಳಲು ಸಹಾಯವಾಗುತ್ತದೆ.

ನಾಜ್ ಅಂತರಾಷ್ಠೀಯ ಪ್ರತಿಷ್ಠಾನದ ನಂಬಿಕೆ ಏನು.
ನಾಜ್ ಅಂತರಾಷ್ಠೀಯ ಪ್ರತಿಷ್ಠಾನವು ಸ್ಥಳಿಯ ಜನ ಸ್ವಂತ ಸಮರ್ಪಕ ಸೇವೆಗಳನ್ನು ಅಭಿವೃದ್ಧಿ ಪಡಿಸಿಕೊಳ್ಳುವಂತಹ ಸ್ವಸಾಮರ್ಥದಲ್ಲಿ ನಂಬಿಕೆಯಿರಿಸಿ ಸೇವೆಯ ಫಲಾನುಭವಿಗಳೇ ಆ ಸೇವಾ ನೀಡಿಕೆದಾರರು ಆಗಿರುತ್ತಾರೆ ಹಾಗೂ ನಾಜ್ ಪ್ರತಿಷ್ಠಾನ ಅಂತಹ ದಿಟ್ಟ ಕ್ರಮಗಳಿಗೆ ಸದಾತನ್ನ ಬೆಂಬಲ ನೀಡುತ್ತದೆ.

ನಾಜ್ ಅಂತಾರಾಷ್ಟ್ರೀಯ ಪ್ರತಿಷ್ಠಾನದ ಮುಂಗಾಣ್ಕೆ :

ನಾವು ಸಾಮಾಜಿಕ ನ್ಯಾಯ ಮತ್ತು ಸುಕ್ಷೆಮದಿಂದಿರುವ ಎಲ್ಲ ಜನರು ಗೌರವದಿಂದ ಬದುಕಲು ಸಾಧ್ಯವಾಗುವಂತಹ ಜಗತ್ತಿನ ಬಗ್ಗೆ ನಂಬಿಕೆಯಿರಿಸಿದ್ದೇವೆ. ಪುರುಷರೊಂದಿಗೆ ಲೈಂಗಿಕ ಸಂಪರ್ಕ ಹೊಂದಿರುವ ಪುರುಷರ ಬಗ್ಗೆ ನಮ್ಮ ಕೇಂದ್ರೀಕೃತ ಗಮನ. ಸಮಾಜದಿಂದ ದೂರವಿರುವ ಮತ್ತು ಸೌಲಭ್ಯವಂಚಿತ ಪುರುಷರನ್ನು ಸಶಕ್ತಗೊಳಿಸುವುದು ನಮ್ಮ ಸಂಕಲ್ಪ, ಅವರು ಸಾಮಾಜಿಕ ನ್ಯಾಯ, ಸಮಾನತೆ, ಆರೋಗ್ಯ ಹಾಗು ಕ್ಷೇಮಾಭಿವೃದ್ಧಿಯನ್ನು ಪಡೆಯಲು ತಾಂತ್ರಿಕ, ಸಾಂಸ್ಥಿಕ ಹಾಗು ಆರ್ಥಿಕ ಬೆಂಬಲ ಒದಗಿಸುವುದು.

**ನಾಜ್ ಅಂತಾರಾಷ್ಟ್ರೀಯ ಪ್ರತಿಷ್ಠಾನದ ಉದ್ದೇಶಗಳು :**

- ಅಲ್ಪ ವರಮಾನದ ಎಂ ಎಸ್ ಎಂ ಸಂಘಟನೆಗಳು, ತಂಡಗಳು ಮತ್ತು ಕಾರ್ಯ ಜಾಲಗಳನ್ನು ತಾಂತ್ರಿಕ, ಆರ್ಥಿಕ ಮತ್ತು ಸಾಂಸ್ಥಿಕ ಬೆಂಬಲ ನೀಡುವ ಮೂಲಕ ಸಶಕ್ತಗೊಳಿಸುವುದು. ತನ್ಮೂಲಕ ಅವರು ತಮ್ಮದೇ ಸ್ವಂತ ಸ್ವಸಹಾಯ ಲೈಂಗಿಕ ಆರೋಗ್ಯ, ಕ್ಷೇಮಾಭಿವೃದ್ಧಿ ಮತ್ತು ಮಾನವ ಹಕ್ಕುಗಳ ಅಭಿವೃದ್ಧಿ ಮಾಡಿಕೊಂಡು ಅದರ ಸದುಪಯೋಗ ಪಡೆಯುವುದು ತಮ್ಮ ಅವಶ್ಯಕತೆ ಹಾಗು ತಮ್ಮ ಸಂಗಾತಿಗಳು, ಕುಟುಂಬಗಳ ಅವಶ್ಯಕತೆ ಪೂರೈಕೆ ಮಾಡಿಕೊಳ್ಳುವುದು.
- ಎಂ ಎಸ್ ಎಂ ಕ್ಷೇಮಾಭಿವೃದ್ಧಿಗಾಗಿ ಅವರ ಜೀವನ ಸುಧಾರಣೆಗೆ, ಅವರ ಸಂಗಾತಿಗಳು ಹಾಗು ಕುಟುಂಬದವರ ಒಳಿತಿಗೆ ಇತರ ಸಂಸ್ಥೆಗಳೊಂದಿಗೆ ಕಾರ್ಯ ನಿರ್ವಹಿಸುವುದು.
- ಅಲ್ಪವರಮಾನದ ಎಂ ಎಸ್ ಎಂ ಗಳು, ಅವರ ಸಂಗಾತಿಗಳು ಹಾಗು ಕುಟುಂಬಗಳ ಸಾಮಾಜಿಕ ನ್ಯಾಯ ಮತ್ತು ಮಾನವ ಹಕ್ಕುಗಳ ಕಾಳಜಿ ಕುರಿತು ಅವರಿಗೆ ತಿಳಿವಳಿಕೆ ಮೂಡಿಸುವುದು.
- ಸಹಕಾರ, ಅರ್ಥೈಸುವಿಕೆ ಮತ್ತು ಬೆಂಬಲ ಹೆಚ್ಚಿಸುವುದು. ಅಂದರೆ, ಲೈಂಗಿಕ ಸಂಪರ್ಕ ರೋಗಗಳು / ಎಚ್ ಐ ವಿ / ಏಡ್ಸ್, ಲೈಂಗಿಕ ಆರೋಗ್ಯ, ಕ್ಷೆಮಾಭಿವೃದ್ಧಿ ಮತ್ತು ಎಂ ಎಸ್ ಎಂ ಗಳ ಮಾನವ ಹಕ್ಕುಗಳು. ಅವರ ಸಂಗಾತಿಗಳು ಹಾಗು ಕುಟುಂಬಗಳ ಅಗತ್ಯಗಳ ಬಗ್ಗೆ ಸೂಕ್ತ ಯೋಜನೆಗಳನ್ನು ರೂಪಿಸುತ್ತಿರುವ ಸಂಸ್ಥೆಗಳ ನಡುವೆ ಸಹಕಾರ, ಅರ್ಥೈಸುವಿಕೆ ಮತ್ತು ಬೆಂಬಲ ಹೆಚ್ಚಿಸುವುದು.
- ಸಾಮಾಜಿಕವಾಗಿ ಮೂಲೆಗುಂಪಾದ ಮತ್ತು ಸಮಾಜದಿಂದ ಬೇರೆಯಾದ ಎಂ ಎಸ್ ಎಂ ಗಳ ಸಮಸ್ಯೆ ಹಾಗು ಪ್ರಕರಣಗಳನ್ನು ಬಿಂಬಿಸುವಂತಹ ಸಂಶೋಧನೆ ಕೈಗೊಳ್ಳುವುದು. ಅವರ ಸಮಸ್ಯೆಗೆ ಪರಿಹಾರ ಹುಡುಕುವುದು ಮತ್ತು ಅದನ್ನು ಕಾರ್ಯಗತಗೊಳಿಸಲು ಮುಂದಾಗುವುದು, ಹಾಗು ಲೈಂಗಿಕತೆ ಹಾಗು ಪುರುಷರ ಸನ್ನಿವೇಶವನ್ನು ಅರ್ಥಮಾಡಿಕೊಳ್ಳುವ ಮೂಲಕ ಮತ್ತಷ್ಟು ಪರಿಣಾಮಕಾರಿ ಹಾಗು ಶಾಶ್ವತ ಲೈಂಗಿಕ ಆರೋಗ್ಯ ಸಂವರ್ಧನೆ ಕಾರ್ಯ ತಂತ್ರಗಳನ್ನು ರೂಪಿಸುವುದು.
- ಈ ಮೇಲೆ ತಿಳಿಸಲಾದ ಎಲ್ಲ ಚಟುವಟಿಕೆಗಳಿಗೆ ಬೆಂಬಲ ನೀಡುವಂತಹ ಸಮರ್ಪಕ ನಿಧಿ ಸಂಗ್ರಹಣೆ, ಸಂಪನ್ಮೂಲಗಳು ಮತ್ತು ತಾಂತ್ರಿಕ ಸಹಕಾರವನ್ನು ಗುರುತಿಸುವುದು.

ನಾಜ್ ಅಂತಾರಾಷ್ಟ್ರೀಯ ಪ್ರತಿಷ್ಠಾನದ ಕೆಲಸ ಮತ್ತು ಪರಿಕ್ರಮ ಅಂದರೆ, ಬಹಳ ಕಾಲದಿಂದಲೂ ನಿರ್ಲಕ್ಷಿತವಾದ ಲೈಂಗಿಕ ಆರೋಗ್ಯದ ವಿಷಯ ಕುರಿತಂತೆ ಇವರು ಮಾಡುತ್ತಿರುವ ಕೆಲಸ ಹಾಗು ಪರಿಕ್ರಮವನ್ನು ನಾನು ಮೆಚ್ಚುತ್ತೇನೆ.

ಲೈಂಗಿಕ ವೈವಿಧ್ಯದಂತಹ ವಿಷಯಗಳು ನಿಷೇಧಿತ ವಿಷಯಗಳಾಗಿ ಉಳಿಯಬಾರದು ಎಂಬುದು ಮುಖ್ಯ. ಶಿಕ್ಷಣ ಹಾಗು ಚರ್ಚೆಗಳ ಮೂಲಕ ಈ ವಿಷಯಗಳನ್ನು ಚರ್ಚಿಸಿ ಪರಿಗಣಿಸ ಬಹುದು. ಪ್ರಚಲಿತ ದಲ್ಲಿರುವ ನಿರ್ಲಕ್ಷ್ಯ ಮತ್ತು ಪೂರ್ವಗ್ರಹ ಪಡೆಯಲು ಇದೊಂದೇ ಮಾರ್ಗ

ಲಾರ್ಡ್ ಧೊಲಕಿಯ, ಒಬಿಇ
ರಾಜ್ಯ ಸಭೆ ಸಧಸ್ಯ, (ಬ್ರಿಟನ್ ಸಂಸತ್ತು)

# ನಾಜ್ ಪ್ರತಿಷ್ಠಾನದ ಅಂತಾರಾಷ್ಟ್ರೀಯ ಸೇವಗಳು

## ಪ್ರಾದೇಶಿಕ ಸ್ವಸಹಾಯ ಕಾರ್ಯಕ್ರಮ

ತಮ್ಮದೇ ಸ್ವಂತ ಯೋಜನೆಯನ್ನು ಸ್ಥಳೀಯ ಕಾರ್ಯಜಾಲಗಳನ್ನು ರೂಪಿಸಿಕೊಳ್ಳಲು ಸಾಧ್ಯವಾಗುವಂತೆ ಅವುಗಳನ್ನು ಬಲಪಡಿಸಲು ತಾಂತ್ರಿಕ ಸಹಕಾರ ಹಾಗು ತರಬೇತಿ.

## ಪ್ರಾದೇಶಿಕ ತರಬೇತಿ ಮತ್ತು ಸಂಪನ್ಮೂಲ ಕೇಂದ್ರ

ಉತ್ತರ ಭಾರತದ ಲಕ್ನೊದಲ್ಲಿ ದಕ್ಷಿಣ ಏಷಿಯಾ ಪ್ರಾದೇಶಿಕ ಕಚೇರಿಯನ್ನು ಹೊಂದಿರುವ ನಾಜ್ ಅಂತಾರಾಷ್ಟ್ರಿಯ ಪ್ರತಿಷ್ಠಾನವು ಲಿಂಗ, ಪುರುಷತ್ವ, ಲೈಂಗಿಕತೆ, ಎಚ್ ಐ ವಿ / ಏಡ್ಸ್, ಲೈಂಗಿಕ ಆರೋಗ್ಯ, ಮಾನವ ಹಕ್ಕುಗಳು ಮತ್ತು ಕ್ಷೇಮಾಭಿವೃದ್ಧಿ ವಿಷಯಗಳ ಬಗೆ ಮಾಹಿತಿ ಗ್ರಂಥ ಮತ್ತು  ಹೊಂದಿದೆ ಹಾಗೂ ವ್ಯಾಪಕ ಪ್ರಾದೇಶಿಕ ತರಬೇತಿ ಕಾರ್ಯಕ್ರಮಗಳನ್ನು ನೀಡುತ್ತದೆ.

## ಸಹಭಾಗಿತ್ವ ಕಾರ್ಯಕ್ರಮ :

ತನ್ನ ಸಹಭಾಗಿ ಸಂಸ್ಥೆಗಳೊಂದಿಗೆ ಕಾರ್ಯನಿರ್ವಹಣೆ, ಪ್ರತಿಷ್ಠಾನವು ಕಾರ್ಯಜಾಲ, ಮಾಹಿತಿ ಮತ್ತು ಕೌಶಲಗಳ ವಿನಿಮಯ ಹಾಗು ಪ್ರಾದೇಶಿಕ ಬೆಂಬಲಕ್ಕೆ ಪುಷ್ಟಿ ನೀಡುತ್ತದೆ.

ವರ್ತನೆ ಬದಲಾವಣೆ ಸಂವಹನದ ಸಂಪನ್ಮೂಲ ಅಭಿವೃದ್ಧಿ ವರ್ತನೆ ಬದಲಾವಣೆ ಸಂವಹನದ ಕುರಿತು ವ್ಯಾಪಕ ಪರಿಕರಗಳನ್ನು ರೂಪಿಸಿ ಹೊರತಂದಿದೆ. ಅಲ್ಲದೆ ಶಿಕ್ಷಣ, ಮಾಹಿತಿ ಪರಿಕರಗಳು, ಎಚ್ ಐ ವಿ / ಏಡ್ಸ್ / ಲೈಂಗಿಕ ಆರೋಗ್ಯ, ಕ್ಷೇಮಾಭಿವೃದ್ಧಿ ಮತ್ತು ಮಾನವ ಹಕ್ಕುಗಳ ಸಮಸ್ಯೆಗಳ ಬಗ್ಗೆ ಕೂಡ ಪ್ರಕಟಣೆಗಳನ್ನು ಮಾಡಿದೆ.

## ವಿಷಯ ಪ್ರತಿಪಾದನೆ :

ಅಂತರಾಷ್ಟ್ರೀಯ, ರಾಷ್ಟ್ರೀಯ ಹಾಗು ಸ್ಥಳೀಯ ಸಂಸ್ಥೆಗಳು, ಏಜೆನ್ಸಿಗಳು ಹಾಗೂ ಸಂಘಟನೆಗಳೊಂದಿಗೆ ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಕ್ಷೇಮಾಭಿವೃದ್ಧಿ ವಿಷಯಗಳಿಗೆ ಸಂಬಂಧಿಸಿದಂತೆ ಕಾರ್ಯ ನಿರ್ವಹಿಸುತ್ತಿದೆ

## ಸಂಶೋಧನೆ ಮತ್ತು ದಾಖಲಾತಿ

ದುರ್ಬಲ ಪುರುಷರು, ಅವರ ಸಂಗಾತಿಗಳು ಮತ್ತು ಕುಟುಂಬಗಳ ಆರೋಗ್ಯ, ಐಶ್ವರ್ಯ, ಮಾನವ ಹಕ್ಕುಗಳ ಮೇಲೆ ಪರಿಣಾಮ ಬೀರುವಂತಹ ವಿಷಯ, ಸಮಸ್ಯೆಗಳ ಕುರಿತು ಸಂಶೋದನೆ, ಅಭ್ಯಾಸಕ್ಕೆ ಸಹಕಾರ ಒದಗಿಸುತ್ತದೆ ಹಾಗು ಅದರ ರೂಪಣೆಗೆ ಸಹಕರಿಸುತ್ತದೆ.

## ಈ ಸರಣಿ ಪುಸ್ತಕ ಮೂಲೆಯಲ್ಲಿ ಬಳಸಲಾದ ಪದಗಳ ಅರ್ಥ ವಿವರಣೆ :

**ದ್ವಿಲಿಂಗಿ :**
ಪುರುಷತ್ವ ಹಾಗು ಸ್ತ್ರೀತ್ವ ಅಥವಾ ಗಂಡು ಹಾಗು ಹೆಣ್ಣು ಎರಡೂ ಇರುವಂತಹವರು.

**ಲಿಂಗ :**
ಗಂಡು ಮತ್ತು ಹೆಣ್ಣಿನ ನಡುವೆ ಮೂಲಭೂತವಾಗಿ ಜೈವಿಕ ವ್ಯತ್ಯಾಸಗಳಿರುತ್ತವೆ. ಸಂತಾನೋತ್ಪತ್ತಿ ಮೊದಲಾದುವುಗಳಿಗೆ ಸಂಬಂಧಿಸಿದಂತೆ ಅಂಗಗಳು ಬೇರೆ ಬೇರೆಯಾಗಿರುತ್ತದೆ. ಹಲವು ಸಮಾಜಗಳು ಗಂಡು ಮತ್ತು ಹೆಣ್ಣಿಗೆ ಬೇರೆ ಬೇರೆ ಪಾತ್ರಗಳನ್ನು, ಕರ್ತವ್ಯಗಳನ್ನು ಕೊಡ ನಿಗದಿಮಾಡಿವೆ. ಅಂತೆಯೇ ಲಿಂಗ ಎನ್ನುವ ಪದವು ಈ ಗಂಡು, ಹೆಣ್ಣಿನ ನಡುವೆ, ಈ ಸಾಮಾಜಿಕ ಪಾತ್ರ ಮತ್ತು ವ್ಯತ್ಯಾಸಗಳಿಗೆ ಅನ್ವಯಿಸುತ್ತದೆ.

ಈ ಗ್ರಹೀತ ಲಿಂಗ ವ್ಯತ್ಯಾಸಗಳು ವಿಶಾಲವಾಗಿ ಸಮಾಜದಲ್ಲಿ ಅಥವಾ ಸಂಸ್ಕೃತಿಯಲ್ಲಿ ಮತ್ತು ಕಟ್ಟುಪಾಡುಗಳನ್ನು ಆಧರಿಸಿದೆ. ಈ ನಂಬಿಕೆಗಳು ಮತ್ತು ಕಟ್ಟುಪಾಡುಗಳು ಸಾಮಾನ್ಯವಾಗಿ ಗಂಡು ಮತ್ತು ಹೆಣ್ಣಿನ ನಡುವೆ ಅಸಮಾನತೆ ಹುಟ್ಟು ಹಾಕುವಂತಹವಾಗಿದೆ. ಹಲವಾರು ಸಮಾಜಗಳಲ್ಲಿ ಪುರುಷರು ಹೆಣ್ಣಿಗಿಂತ ಹೆಚ್ಚಿನ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಅಧಿಕಾರವನ್ನು ಹೊಂದಿರುತ್ತಾರೆ. ಅಂತಹ ಲಿಂಗ ಅಸಮಾನತೆಗಳು ಮಹಿಳೆ ಮತ್ತು ಪುರುಷರು ಲೈಂಗಿಕ ಆರೋಗ್ಯದ ಮೇಲೆ ಗಮನಾರ್ಹ ಪರಿಣಾಮ ಬೀರುತ್ತವೆ.

**ಲಿಂಗಾಧಾರಿತ ಚೌಕಟ್ಟು:**

ಲಿಂಗ ಎನ್ನುವುದನ್ನು ಬಳಸಿದಾಗ ಅದು ಹೆಣ್ಣನ್ನೇ ಕೇಲಿದ್ರೀಕರಿಸುತ್ತದೆ. ಅಲ್ಲಿ ಪುರುಷರ ವಿಷಯ ಬರುವುದಿಲ್ಲ. ಈ ಸರಣಿಯಲ್ಲಿ ಲಿಂಗಕ್ಕೆ ಸಂಬಂಧಿಸಿದಂತೆ ಪದ ಬಳಕೆಯಾಗುವುದಿದ್ದರೆ, ಅದು ಸ್ಥಿತಿಯನ್ನು ವರ್ಣಿಸಲು ಮಾತ್ರ. ಉದಾ : ದಕ್ಷಿಣ ಆಫ್ರಿಕಾದಲ್ಲಿ ಲಿಂಗ ಚೌಕಟ್ಟಿನ ಹಿಡಿತ ಬಿಗಿಯಾಗಿದ್ದಲ್ಲಿ . ಪುರುಷ ಪುರುಷರ ನಡುವಣ ಲೈಂಗಿಕತೆಯ ಪ್ರಾಥಮಿಕ ಚೌಕಟ್ಟು(ಕಣ್ಣಿಗೆ ಕಾಣುವಂತಹ) ಲೈಂಗಿಕ ಆಸಕ್ತಿ ಸುತ್ತ ನಿರ್ಮಿತವಾಗಿಲ್ಲ ಬದಲಿಗೆ ಇಂತಹ ವ್ಯವಹಾರಗಳ ವರ್ಣನೆಯ ಸಂಕ್ಷಿಪ್ತ ರೂಪದಂತೆ ಬಳಸಲಾಗುತ್ತದೆ. ಉದಾಹರಣೆಗೆ, 'ಕೋತಿ' ಎಂದು ವ್ಯಾಖ್ಯಾನಿಸಲಾಗುವ ಪುರುಷರು ತಮ್ಮನ್ನು ತಾವು ಪುರುಷರೆಂದು ಕರೆದು ಕೊಳ್ಳುವುದಿಲ್ಲ, ಆದರೆ ಪುರುಷರಲ್ಲ ಅಥವಾ ಹೆಂಪುರುಷರು ಎಂದು ಕರೆದುಕೊಳ್ಳುತ್ತಾರೆ.

**ಶ್ರೇಣೀಕೃತ ಮತ್ತು ವಿರೋಧಿತ ಚೌಕಟ್ಟು:**

ಈ ಪದಗಳನ್ನು ಲಿಂಗಗಳು ಮತ್ತು ಅವುಗಳ ಲಕ್ಷಣಗಳನ್ನು ಶ್ರೇಣಿಯಾಧರಿಸಿ ಮತ್ತು ಪರಸ್ಪರ ವಿರೋಧವಾಗಿ ಕಾಣಲಾಗುತ್ತದೆ. ಅಂದರೆ ಪುರುಷತ್ವವನ್ನು ಸ್ತ್ರೀತ್ವಕ್ಕಿಂತ ಶ್ರೇಷ್ಠವೆಂದು ಮತ್ತು ಅದಕ್ಕೆ ವಿರುದ್ಧವಾಗಿ ಕಾಣಲಾಗುತ್ತದೆ.

**ಸಾಮಾಜಿಕ ಸಲಿಂಗತ್ವ ಮತ್ತು ಸಲಿಂಗ ಸ್ನೇಹ ಸಂಸ್ಕೃತಿ :**

ದಕ್ಷಿಣಾ ಏಷಿಯದಲ್ಲಿ ಸಾಮಾಜಿಕವಾಗಿ ಲಿಂಗ ಪ್ರತ್ಯೇಕತೆ ಎದ್ದು ಕಾಣುತ್ತದೆ. ವಿರೋಧಿ ಲಿಂಗಗಳ ನಡುವಣ ಬಾಂಧವ್ಯಗಳು ಕೇವಲ ಸಮಾನ ಲಿಂಗಗಳ ನಡುವೆ ಮಾತ್ರವಿದ್ದು ಅದಕ್ಕೆ ಸಾಮಾಜಿಕ ಒಪ್ಪಿಗೆಯು ಇರುತ್ತದೆ. ಸಲಿಂಗ ಸ್ನೇಹ ಎಂದರೆ ಸಾರ್ವಜನಿಕವಾಗಿ ಗಂಡು ಗಂಡಿನ ನಡುವಿನ ಸ್ನೇಹಕ್ಕೆ ಅಥವಾ ಹೆಣ್ಣು ಹೆಣ್ಣಿನ ನಡುವಿನ ಸ್ನೇಹಕ್ಕೆ ಸಾರ್ವಜನಿಕ ಸಮ್ಮತಿಯಿದೆ. ಇಬ್ಬರು ಗಂಡಸರು ಹೆಗಲ ಮೇಲೆ ಕೈಹಾಕಿ ಓಡಾಡುವ ಅಥವಾ ಕೈ ಕೈ ಹಿಡಿದು ನಡೆಯುವುದಕ್ಕೆ ಯಾರು ವಿರೋಧಿಸುವುದಿಲ್ಲ. ಕೆಲವೊಮ್ಮೆ ಇಬ್ಬರು ಗಂಡಸರು ಒಂದೇ ಹಾಸಿಗೆಯಲ್ಲಿ ಜೊತೆಯಾಗಿ ಮಲಗುವರು ಕೂಡ.

**ಹಿಜಡಾಗಳು :**

ತಾವು ಹೆಣ್ಣು ಅಲ್ಲ / ಗಂಡೂ ಅಲ್ಲ ಆದರೆ ಮೂರನೇ ಲಿಂಗ ಎಂದು ತಮ್ಮನ್ನು ತಾವೇ ಗುರುತಿಸಿಕೊಳ್ಳುವುದಕ್ಕೆ ಸ್ವಯಂ ಘೋಷಿತ ಪದ ಹಿಜಡಾ. ಹಿಜಡಾಗಳು ಸಾರ್ವಜನಿಕವಾಗಿ ಮತ್ತು ಖಾಸಗಿಯಾಗಿ ಬೇರೆ ಬೇರೆ ರೀತಿಯಲ್ಲಿ ಬಟ್ಟೆ ತೊಡುತ್ತಾರೆ. ಅವರು ಸಾಮಾಜಿಕ, ಧಾರ್ಮಿಕ, ಮತ್ತು ಸಾಂಸ್ಕೃತಿಕ ಸಮುದಾಯದ ಭಾಗ. ಹಿಜಡಾ ಸಮುದಾಯದಲ್ಲಿ ಬೀಜ ಒಡೆಯುವಿಕೆ ಒಂದು ಸಂಪ್ರದಾಯ. ಆದರೆ ಎಲ್ಲ ಹಿಜಡಾಗಳಿಗೂ ಈ ವಿಧಿ ನಡೆದಿರುತ್ತದೆ ಎಂದೇನಿಲ್ಲ. ಇತರ ಪುರುಷರೊಂದಿಗೆ ಲೈಂಗಿಕ ಸಂಪರ್ಕ ಮಾಮುಲು. ಅವರಿಗೆ ತಮ್ಮದೇ ಆದ ಭಾಷೆಯಿದ್ದು ಅದಕ್ಕೆ ಉಲ್ಟಿ ಎನ್ನುತ್ತಾರೆ.



**ಕೋತಿಗಳು (ನೇಪಾಳ : ಮೇಟಗಳು, ಪಾಕಿಸ್ತಾನ : ಜೆನಾನಾಗಳು) :**

ಪುರುಷರು ಹೆಣ್ಣಿನ ವರ್ತನೆ ತೋರುವರು (ಪುರುಷತ್ವ ವಿರುವ ಗಂಡನ್ನು ಆಕರ್ಷಿಸಲು ಅಥವಾ ತಮ್ಮ ಲಿಂಗ ನಿರ್ಮಾಣಾದ ಭಾಗವಾಗಿ ಕೆಲವೊಮ್ಮೆ ಸಂದರ್ಭಕ್ಕೆ ತಕ್ಕಂತೆ) ಮತ್ತು ಲೈಂಗಿಕ ಸಂಪರ್ಕದ ವೇಳೆ ಗುದ ಸಂಭೋಗ ಮತ್ತು ಅಥವಾ ಬಾಯಿ ಸಂಭೋಗ ಆಯ್ಕೆ ಮಾಡುವಂತಹವರು ಕೋತಿಗಳ ವರ್ತನೆ ಸಾಮಾಜಿಕವಾಗಿ ನಾಟಕೀಯ ಲಕ್ಷಣಗಳಿರುವಂತಹವು. ತಮ್ಮನ್ನು ತಾವೇ ಕೋತಿಗಳೆಂದು ಕರೆದು ಕೊಳ್ಳುವವರು ಕೇಲ ಪುರುಷರನ್ನು ಅವರು ಹೆಣ್ಣಿನಂತೆ ವರ್ತಿಸದಿದ್ದರೂ ಲೈಂಗಿಕ ಸಂಪರ್ಕ ಅವರ ಆಯ್ಕೆಯಾಗಿದ್ದರೆ ಅವರನ್ನು ಕೂಡ ಕೋತಿ ಅನ್ನುತ್ತಾರೆ. ಇದು ಪುರುಷ ಪುರುಷರ ಲೈಂಗಿಕತೆ ವರ್ತನೆಯ ಎದ್ದು ಕಾಣುವಂತಹ ಪ್ರಾಥಮಿಕ ಚೌಕಟ್ಟು. ಕೋತಿ ತಾವು ಇತರ ಕೋತಿಗಳ ಜೊತೆ ಲೈಂಗಿಕ ಸಂಪರ್ಕ ಹೊಂದುವುದಿಲ್ಲ ಎಂದು ಹೇಳುತ್ತಾರೆ. ಆದರೆ ಇದು ಯಾವಾಗಲೂ ಸತ್ಯವಲ್ಲ. ಅವರು ಹೆಣ್ಣಿನೊಂದಿಗೆ ಮದವೆ ಕೂಡ ಮಾಡಿಕೊಂಡಿರುತ್ತಾರೆ.

**ಪುರುಷತ್ವ:**

ಪುರುಷತ್ವವನ್ನು ಪ್ರಾಮುಖ್ಯವುಳ್ಳ ಮತ್ತು ಮುಂದಾಳ್ತನ ಚೌಕಟ್ಟಾಗಿ ವಿವರಿಸಲಾಗುತ್ತದೆ. ಗಂಡಸು ವೈಯಕ್ತಿಕವಾಗಿ, ಲೈಂಗಿಕವಾಗಿ, ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಹೇಗೆ ವರ್ತಿಸ ಬೇಕೆಂಬುದನ್ನು ಇದು ವ್ಯಾಖ್ಯೆ ಮಾಡುತ್ತದೆ. ಆದರೆ, ಬೇರೆ ಬೇರೆ ರೀತಿಯ ರಚನೆಗಳೂ ಇದ್ದು ಸಂಸ್ಕೃತಿ, ವಯೋಮಾನ,

ಲೈಂಗಿಕ ಆಸಕ್ತಿ, ಲೈಂಗಿಕ ಆಯ್ಕೆಗಳು, ನೈಜ ವರ್ತನೆಗಳು, ಲಿಂಗ ಗುರುತಿಸುವಿಕೆಗಳು, ಆರ್ಥಿಕ ವರ್ಗ ಮತ್ತು ಧಾರ್ಮಿಕತೆಗಳನ್ನು ಆಧರಿಸಿ ಬೇರೆ ಬೇರೆ ಆಗಿರುತ್ತದೆ.

**ಪುರುಷರೊಂದಿಗೆ ಲೈಂಗಿಕ ಸಂಪರ್ಕವಿರುವ ಪುರುಷರು :**

ಪುರುಷ ಎಂಬ ಪದವನ್ನು ದಕ್ಷಿಣ ಏಷಿಯದಲ್ಲಿ ವಿವಿಧ ವಯೋಮಾನ ಮತ್ತು ಪುರುಷತ್ವ ಹಾಗು ಲಿಂಗರಚನೆ ಪರಿಗಣಿಸಿ ಬಳಸಲಾಗುತ್ತದೆ. ಉದಾಹಣೆಗೆ ಒಬ್ಬ ವ್ಯಕ್ತಿ ಪುರುಷನಾಗುವುದು ಮದುವೆಯಾದಾಗ. ಪರಿವರ್ತಿತ ಲಿಂಗಗಳು ತಮ್ಮನ್ನು ತಾವೇ ಪುರುಷ ಎಂದು ಎಲ್ಲ ಕಾಲಕ್ಕೂ ಕರೆದುಕೊಳ್ಳುವುದಿಲ್ಲ. ಕೆಲವೆಡೆ ಪುರುಷರೊಂದಿಗೆ ಪುರುಷ ಲೈಂಗಿಕ ಸಂಪರ್ಕ ವಿದೆ ಎಂದು ಹೇಳುವವರ ಲೈಂಗಿಕ ವರ್ತನೆ ಸಾಂಪ್ರದಾಯಿಕವಾಗಿ ನಾವು ಯಾವುದನ್ನು ಬಾಲ್ಯ ಎಂದು ಭಾವಿಸುತ್ತೇವೋ ಅದಾಗಿರುತ್ತದೆ.

**ಪಂತಿಗಳು :**

ಪುರುಷನಂತಿರುವ ಗಂಡಸಿಗೆ ಕೋತಿ ಎಂಬ ಹಣೆಪಟ್ಟಿ ಪುರುಷರೊಂದಿಗೆ ಪುರುಷ ಲೈಂಗಿಕ ಸಂಪರ್ಕವಿರುವವರ ವರ್ತನೆಗಳು ಕೂಡ ಲಿಂಗಾಧಾರಿತವೇ ಆಗಿದೆ. ದಕ್ಷಿಣ ಏಷಿಯಾದಲ್ಲಿ ಪುರುಷ-ಪುರುಷ ಲೈಂಗಿಕತೆ ಈ ವಿನ್ಯಾಸವನ್ನು ಅನುಸರಿಸುವುದಿಲ್ಲ. ಇಲ್ಲಿ ಕೋತಿಗೆ ಪುರುಷ ಎಂದು ವ್ಯಾಖ್ಯೆಯಿಲ್ಲ. ಸಂಗಾತಿ ತನ್ನನ್ನು ತಾನು ಪುರುಷ ಎಂದು ಕರೆದು ಕೊಳ್ಳಲು ಅವಕಾಶ ಒದಗಿಸಲಾಗುತ್ತದೆ. ಪಂತಿ ಎಂದರೆ, ಬೇರೊಬ್ಬ ಗಂಡಾಗಲಿ ಅಥವಾ ಹೆಣ್ಣಾಗಲ್ಲಿ ಲೈಂಗಿಕ ಸಂಪರ್ಕದಲ್ಲಿ ಶಿಶ್ನ ತೂರಿಸುವಿಕೆ ಮಾಡುವಂತಹವರು. ಪಂತಿಗಳು ಹೆಣ್ಣನ್ನು ಮದುವೆಯಾಗುತ್ತಾರೆ. ಅವರು ಸಾಮಾಜಿಕವಾಗಿ ವಿವಿಧ ಉದ್ಯೋಗಗಳಲ್ಲಿ ಇರುತ್ತಾರೆ. ರಿಕ್ಷಾಚಾಲಕರಿಂದ ವ್ಯಾಪಾರೋದ್ಯಮಿವರೆಗೆ ಹರಡಿದ್ದಾರೆ.

**ಪರಿಕ್‌ಗಳು :**

ಕೋತಿಯ ಗಂಡನಿಗೆ ಕೋತಿ ಹಣೆಪಟ್ಟಿ ಪರಿಕ್‌ಗಳು ಹೆಣ್ಣಿನೊಂದಿಗೆ ಮದುವೆಯಾಗಿರುತ್ತಾರೆ. ಇತರ ಹೆಣ್ಣುಗಳೊಂದಿಗೆ ಹಾಗು ಬೇರೆ ಗಂಡಸರ ಜೊತೆಗೂ ಲೈಂಗಿಕ ಸಂಪರ್ಕ ಹೊಂದಿರುತ್ತಾರೆ.

**ಲೈಂಗಿಕತೆ :**

ಯಾವುದೇ ವ್ಯಕ್ತಿ ಲೈಂಗಿಕ ಕಾಮನೆ, ಲಿಂಗತ್ವ, ನಿಜವರ್ತನೆ ಮತ್ತು ತನ್ನ ಲೈಂಗಿಕತೆಯ ಬಗೆಗಿನ ಭಾವನೆ ಬಗೆಗೆ ಇರುವ ನಿರ್ದಿಷ್ಟ ಸಾಂಸ್ಕೃತಿಕ ಸನ್ನಿವೇಶಗಳು ಮತ್ತು ಇತರರು ಅದನ್ನು ಗ್ರಹಿಸಿ ಹೇಗೆ ವ್ಯಾಖ್ಯಾನಿಸುತ್ತಾರೆ ಎಂಬುದರ ಹಿನ್ನೆಲೆಯಲ್ಲಿ ವ್ಯಕ್ತಿ ತನ್ನನ್ನು ತಾನು ಹೇಗೆ ವ್ಯಾಖ್ಯಾನಿಸುತ್ತಾನೆ. ಯಾವುದೇ ಸಂಸ್ಕೃತಿಯಲ್ಲಿ ಲೈಂಗಿಕತೆಯ ವಿವಿಧತ್ವಗಳು ಇರುವುದು ಕಂಡುಬಂದಿದೆ. ವಿವಿಧ ವಯೋಮಾನ, ಲೈಂಗಿಕಾಸಕ್ತ, ಲೈಂಗಿಕ ನಿರ್ಧಿಷ್ಟತೆಗಳು ನಿಜವರ್ತನೆಗಳು ಇವುಗಳನ್ನು ಆಧರಿಸಿರುತ್ತವೆ.

**ಸಾಮಾಜಿಕ ರಾಚನಿಕತೆ :**

ಪುರುಷತೆ, ಲೈಂಗಿಕತೆ ಮತ್ತು ಲೈಂಗಿಕ ವರ್ತನೆಗಳು (ಲೈಂಗಿಕ ಕಾಮನೆ ಕೂಡ) ಸಾಮಾಜಿಕ ಮತ್ತು ಲೈಂಗಿಕ ಬರಹ ಪ್ರಕ್ರಿಯೆ ಮೂಲಕ ಸಾಮಾಜಿಕವಾಗಿ ರಚಿತವಾಗಿರುವಂತಹುದು ಎಂಬುದನ್ನು ಎತ್ತಿ ಹಿಡಿವ ಸಿದ್ಧಾಂತ.

## ದಕ್ಷಿಣ ಏಷಿಯಾದಲ್ಲಿ ಲೈಂಗಿಕತೆ ಮತ್ತು ಲೈಂಗಿಕ ಆರೋಗ್ಯ - ಸೈದ್ಧಾಂತಿಕ ಚೌಕಟ್ಟು:

ಎಚ್ ಐ ವಿ / ಏಡ್ಸ್ ಪ್ರಕರಣಗಳು ಏರುತ್ತಿರುವ ದಕ್ಷಿಣ ಏಷಿಯಾದಲ್ಲಿ ಲೈಂಗಿಕ ರೋಗಗಳು ಮತ್ತು ಎಚ್ ಐ ವಿ / ಏಡ್ಸ್‌ನ ಪಡೆ ಕಾರ್ಯಕ್ರಮಗಳು ಹೆಚ್ಚು ಪರಿಣಾಮಕಾರಿಯಾಗಿರಬೇಕು ಎಂಬುದಕ್ಕೆ ಹೆಚ್ಚಿನ ಒತ್ತು ದೊರೆತಿದ್ದು ಈ ಸಂದರ್ಭದಲ್ಲಿ ಅದಕ್ಕೆ ಸಂಬಂಧಿಸಿದಂತೆ ನಡೆಯುತ್ತಿರುವ ಚರ್ಚೆಗಳು ಹೆಚ್ಚಿನ ತ್ವರಿತತೆ ಪಡೆದುಕೊಳ್ಳುತ್ತವೆ. ದಕ್ಷಿಣ ಏಷಿಯಾದಲ್ಲಿನ ಸಾಂಸ್ಕೃತಿಕ ಚೌಕಟ್ಟಿಗೆ ತಕ್ಕಂತೆ ನಿರ್ದಿಷ್ಟ ಕಾರ್ಯಕ್ರಮಗಳು ರೂಪುಗೊಳ್ಳಬೇಕು ಏಕೆಂದರೆ ಈ ಸಾಂಸ್ಕೃತಿಕ ಚೌಕಟ್ಟಿಗೆ ಅನುಗುಣವಾಗಿ ಲೈಂಗಿಕ ವರ್ತನೆಗಳು ಇರುತ್ತದೆ. ಹಾಗಾಗಿ ಅದಕ್ಕೆ ನಿರ್ದಿಷ್ಟವಾಗಿ ಕಾರ್ಯಕ್ರಮಗಳು ಇಲ್ಲದಿದ್ದರೆ ಅವು ಪರಿಣಾಮಕಾರಿಯಾಗಿರುವುದಿಲ್ಲ. ಜೊತೆಗೆ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸುತ್ತಿವೆ.

ಸೂಕ್ತ ಕಾರ್ಯ ತಂತ್ರಗಳು ಮತ್ತು ಕಾರ್ಯಕ್ರಮಗಳನ್ನು ರೂಪಿಸುವ ಮೊದಲು ನಾವು ಮೊದಲಿಗೆ, ದಕ್ಷಿಣ ಏಷಿಯಾ ಸಂಸ್ಕೃತಿಯಲ್ಲಿನ ಲಿಂಗ ರಾಜಕೀಯತೆ, ಲೈಂಗಿಕತೆ ಮತ್ತು ಲೈಂಗಿಕ ವರ್ತನೆ ಹಾಗೂ ಲೈಂಗಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ಅದರ ಸ್ಥಿತಿಗತಿ ಶಾಸ್ತ್ರ ಹೇಗೆಂಬುದನ್ನು ಶೋಧಿಸಿ ಮಾಡಬೇಕು. ಸಂವಾದವನ್ನು ಪರಿಣಾಮಕಾರಿಯಾಗಿ ಮಾಡಲಿಲ್ಲವೆಂದರೆ, ಲೈಂಗಿಕತೆಯ ಸಂಕೀರ್ಣ ವೈಯಕ್ತಿಕತೆ ಮತ್ತು ಸಾಮಾಜಿಕ ಅಂಶಗಳನ್ನು ಅರ್ಥಮಾಡಿಕೊಳ್ಳಲು ಎಂದರೆ, ಲೈಂಗಿಕ ಸಂಸ್ಕೃತಿಯಿಂದಲೇ ಹುಟ್ಟುವ ಲೈಂಗಿಕ ವರ್ತನೆ ಮತ್ತು ಅದರ ಕಾರ್ಯಗತಿ ಸರಿಯಾಗಿ ಅರ್ಥಮಾಡಿಕೊಳ್ಳದೇ ಹೋದರೆ, ಪರಿಣಾಮಕಾರಿ ತಡೆ ಪರಿಸರಗಳನ್ನು ಅಭಿವೃದ್ಧಿ ಪಡಿಸುವುದು ಸಾಧ್ಯವಿಲ್ಲ.

ಭಾರತದಲ್ಲಿ ಲೈಂಗಿಕ ರೋಗ, ಹೆಪಟೈಟಿಸ್ ಬಿ ಮತ್ತು ಎಚ್ ಐ ವಿ / ಏಡ್ಸ್ ರೋಗಗಳು ಗಮನಾರ್ಹವಾಗಿ ಏರುತ್ತಿದೆ. ಅಲ್ಲದೇ ನೆರೆಹೊರೆ ದೇಶಗಳಲ್ಲಿ ಕೂಡ ಏರಿಕೆ ಕಂಡು ಬಂದಿದೆ. ದಕ್ಷಿಣ ಏಷಿಯಾ ಸರ್ಕಾರಗಳು ಈಗಾಗಲೇ ಎಚ್ ಐ ವಿ ಸೋಂಕಿನಿಂದ ಬಳಲುತ್ತಿರುವವರ ಆರೋಗ್ಯ ರಕ್ಷಣೆ ಅವಶ್ಯಕತೆಗಳ ವಿಷಯದಲ್ಲಿ ಹೊಂದಾಣಿಕೆ ಮಾಡಿ ಕೊಂಡಿವೆ ಪ್ರಾಥಮಿಕ, ಮಾಧ್ಯಮಿಕ ಮತ್ತು ತೃತೀಯ ಹಂತದ ಆರೈಕೆ ವ್ಯವಸ್ಥೆಗಳನ್ನು ಅವುಗಳ ಸಾಮರ್ಥ್ಯ ಮೀರಿ ಎಳೆದು ಪರಿಣಾಮಕಾರಿ ಲೈಂಗಿಕ ಆರೋಗ್ಯ ಸಂವರ್ಧನೆ ಮತ್ತು ಆರೈಕೆ ನೀಡಲು ಸಾಧ್ಯವಾಗುತ್ತಿಲ್ಲ ಇದಕ್ಕೆ ಆರ್ಥಿಕ ನೆರವಿನ ಕೊರತೆ, ಇತರ ಆದ್ಯತೆಗಳು, ನಿರಾಕರಣೆ, ಸಮಸ್ಯೆಗಳ ಅಗೋಚರತೆಯ ಆರ್ಥಿಕ ಒತ್ತಡಗಳು, ಭಯ, ಲೈಂಗಿಕವಾದ, ಲೈಂಗಿಕಭೀತಿ, ಸಲಿಂಗಭೀತಿ ಮತ್ತು ಅಜ್ಞಾನಗಳನ್ನು ಕಾರಣವಾಗಿದೆ.

ದಕ್ಷಿಣ ಏಷಿಯಾದಲ್ಲಿ ಎಚ್ ಐ ವಿ ಸೋಂಕು ಹರಡಲು ಮುಖ್ಯ ಕಾರಣ ಎಂದರೆ - ಲೈಂಗಿಕ ಶಿಶ್ನ ತೂರುವಿಕೆ ಸಂಭೋಗ, ವಿಶ್ವ ಆರೋಗ್ಯ ಸಂಸ್ಥೆಯ ಎಚ್ ಐ ವಿ ಸ್ಥಿತಿ ಅಂದಾಜಿನ ಪ್ರಕಾರ, ವಿಭಿನ್ನ ಲಿಂಗಿ / ಸಲಿಂಗಿ ವಿಭಾಗಗಳಲ್ಲೆ. ಈ ರೋಗದ ಹರಡುವಿಕೆ ಹೆಚ್ಚಾಗಿದೆ. ಹರಡುವಿಕೆಯ ಎಲ್ಲ ಮಾರ್ಗಗಳಲ್ಲಿ ಶೇ 70 ರಷ್ಟು ಈ ಮಾರ್ಗ ಅಂದರೆ ವಿಭಿನ್ನ ಲಿಂಗಿ ಸಂಭೋಗದ ಮುಖಾಂತರವೇ ಎಂದು ತಿಳಿಸಲಾಗಿದೆ. ಆದರೆ ದಕ್ಷಿಣ ಏಷಿಯಾದಲ್ಲಿನ ಲೈಂಗಿಕ ವರ್ತನೆಯ ಸ್ಥಿತಿಗತಿ ಹಿನ್ನೆಲೆಯಲ್ಲಿ ಇದನ್ನು ಪ್ರಶ್ನಿಸ ಬಹುದು. ಏಕೆಂದರೆ ಪುರುಷ - ಪುರುಷ ಲೈಂಗಿಕ ವರ್ತನೆ ಇಲ್ಲಿ ಬಹಿರಂಗಗೊಂಡಿಲ್ಲ.

ದಕ್ಷಿಣ ಏಷಿಯಾದ ಸಂಸ್ಕೃತಿಗಳ ಹಿನ್ನೆಲೆಯಲ್ಲಿ ನೋಡಿದಾಗ ವಿಭಿನ್ನ ಲಿಂಗಿ ಮತ್ತು ಸಲಿಂಗಿ ಚೌಕಟ್ಟುಗಳು ನಿಜಕ್ಕೂ ಹೊಂದುವುದಿಲ್ಲ. ಈ ಪದ ಬಳಕೆಯ ನೇರ ವಿರುದ್ಧವಾದ ಚೌಕಟ್ಟು ಒಂದು ಕೃತಕ ಅರ್ಥವನ್ನು ಸೃಷ್ಟಿಸುತ್ತದೆ. ಅದು ಜನ ಬದುಕುತ್ತಿರುವ ನಿಜವಾದ ಅರ್ಥದಲ್ಲಿ ವಿಭಿನ್ನ ಲಿಂಗಿ ಅಥವಾ ಸಲಿಂಗ ಮೂಲಕ ಹರಡುವಿಕೆ ಇದೆ ಎಂದು ಹೇಳಲಾಗದು. ನಾವು ಹೇಳಲು ಸಾಧ್ಯವಾಗುವ ಅಂಶವೆಂದರೆ ಒಂದು ನಿರ್ದಿಷ್ಟ ಲೈಂಗಿಕ ಕ್ರಿಯೆ ಮೂಲಕ ಎಚ್ ಐ ವಿ ಲೈಂಗಿಕ ಮಾರ್ಗವಾಗಿ ಹರಡುತ್ತಿದೆ ಎಂದು ಮಾತ್ರ ಹೇಳಬಹುದು. ಅದು ಯೋನಿ ಅಥವಾ ಗುದ ಸಂಭೋಗ ಮುಖಾಂತರ. ಇದು ಅರ್ಥವೆಂದರೆ ವಿವಿಧ ಲೈಂಗಿಕ ವರ್ತನೆಗಳು ಬೇರೆ ಬೇರೆಯಾಗಿ ವ್ಯಾಪಕವಾಗಿದ್ದರೂ ಅವು ಒಂದು ನಿರ್ದಿಷ್ಟರಚನೆಯಲ್ಲಿ ಹೊಂದುವುದಿಲ್ಲ. ಈ ಪ್ರಾದೇಶಿಕ ಸಾಂಸ್ಕೃತಿಕ ವ್ಯಕ್ತಿತ್ವದಲ್ಲಿ ಅವನ್ನು ಹೊಂದಿಸಲಾಗುವುದಿಲ್ಲ - ವಿಭಿನ್ನ ಲಿಂಗಿ ಮತ್ತು ಸಲಿಂಗಿ ಎಂಬ ಪದಗಳು ಹೊಮ್ಮಿಸುವ ಪದ ಅರ್ಥವನ್ನು ಅಲ್ಲಿ ಕೊಡಲಾಗದು.

ದಕ್ಷಿಣ ಏಷಿಯಾದ ಪುರುಷ ಲೈಂಗಿಕ ಅನುಭವದ ಚಾಂಚಲ್ಯ ಲೈಂಗಿಕ ಅಗೋಚರತೆಯ ಚೌಕಟ್ಟು, ಲಿಂಗ ಪ್ರತ್ಯೇಕತೆ, ದಕ್ಷಿಣ ಏಷಿಯಾದ ಸಾಮಾಜಿಕತ್ವ, ಸಾರ್ವಜನಿಕ ಸ್ಥಳದ ಮೇಲಿನ ಪುರುಷ ಮೂಲಕತ್ವ, ದಕ್ಷಿಣ ಏಷಿಯಾದ ನಾಚಿಕೆ ಸಂಸ್ಕೃತಿ, ಲೈಂಗಿಕ ಅಗೋಚರತೆ, ಸಮುದಾಯದ ಗೌರವ, ಕಡ್ಡಾಯ ಮದುವೆ ಮತ್ತು ಸಂತಾನೊತ್ಪತ್ತಿ, ದಕ್ಷಿಣ ಏಷಿಯಾದ ಲಿಂಗ ರಾಚನಿಕತೆಗಳು, ವಯಸರಾಗಿ ಪುರುಷ ಮತ್ತು ಮಹಿಳಾ ಪಾತ್ರಗಳು ಮುಂತಾದುವುಗಳು ನಿಜವಾದ ಲೈಂಗಿಕ ವರ್ತನೆ ಮೇಲೆ ಪ್ರಭಾವ ಬೀರುತ್ತವೆ. ಅವುಗಳನ್ನು ಸಲಿಂಗ ಅಥವಾ ವಿಭಿನ್ನ ಲಿಂಗ ಕಾಮದ ಅರ್ಥದಲ್ಲಿ ಸ್ಪಷ್ಟವಾಗಿ ವ್ಯಾಖ್ಯೆಮಾಡಲಾಗದು.

ಮಹಿಳೆ ಮೇಲೆ ಎಚ್ ಐ ವಿ ಯ ಪರಿಣಾಮ, ತೆಗೆದುಕೊಂಡರೆ ಅವರ ಸಂಗಾತಿಗಳಿಗೆ ಇತರ ಪುರುಷರೊಂದಿಗೆ ಇರುವ ಲೈಂಗಿಕ ಸಂಪರ್ಕವನ್ನು ಪರಿಗಣಿಸಬೇಕಾಗುತ್ತದೆ. ಅಂದರೆ, ಪುರುಷ ಲೈಂಗಿಕ ಅಭ್ಯಾಸಗಳನ್ನು ವ್ಯಾಪಕ ಸನ್ನಿವೇಶದ ಹಿನ್ನೆಲೆ ಹಾಗು ವೈಯಕ್ತಿಕ ನೆಲೆಯಲ್ಲಿ ಮಾಡಬೇಕಾಗದೆ. ಸಮರ್ಪಕ ರೀತಿಯಲ್ಲಿ ಅರ್ಥ ಮಾಡಿಕೊಂಡು ಮಹಿಳೆಯ ಸಂತಾನೋತ್ಪತ್ತಿ ಮತ್ತು ಲೈಂಗಿಕ ಆರೋಗ್ಯ ಸುಧಾರಣೆಗೆ ಅದರ ಬಳಕೆ ಆಗುತ್ತದೆ. ಅದು ಮುಖ್ಯ ಅಂಶ ಕೂಡ.

ಈ ಎಲ್ಲ ಸಮಸ್ಯೆಗಳ ಪರಿಹಾರಕ್ಕೆ ಸೂಕ್ತ ಕಾರ್ಯತಂತ್ರಗಳನ್ನು ಅಭಿವೃದ್ಧಿ ಪಡಿಸಲು ಲೈಂಗಿಕ ಸ್ಥಿತಿಗತಿಯನ್ನು ಅರ್ಥ ಮಾಡಿಕೊಳ್ಳಬೇಕಾದ ಅಗತ್ಯವಿದೆ. ಅಲ್ಲದೆ ಲಿಂಗ ವರ್ತನೆಯ ಲಿಂಗ ರಾಚನಿಕತೆಗಳು, ಮನೋ - ಸಾಮಾಜಿಕ ಚೌಕಟ್ಟುಗಳು ಹಾಗು ಅವು ಅಸ್ತಿತ್ವದಲ್ಲಿರುವ ಸನ್ನಿವೇಶಗಳನ್ನು ಅರ್ಥ ಮಾಡಿಕೊಳ್ಳಬೇಕು. ಅದನ್ನು ಸಮರ್ಪಕ ಸಾಂಸ್ಕೃತಿಕ ಚೌಕಟ್ಟನೊಳಗೆ ಅಭಿವೃದ್ಧಿ ಪಡಿಸಿಕೊಳ್ಳಬೇಕು ಮತ್ತು ಅರ್ಥ ಮಾಡಿಕೊಳ್ಳಬೇಕು. ದುರದೃಷ್ಟವಶಾತ್, ಎಚ್ ಐ ವಿ ಮತ್ತು ಎಸ್ ಟಿ ಡಿ ತಡೆ ಹಾಗು ಕ್ಷೇತ್ರ ಕಾರ್ಯಕ್ರಮಗಳ ಅಭಿವೃದ್ಧಿಯಲ್ಲಿ ಲೈಂಗಿಕತೆ, ಅನನ್ಯತೆಗಳು, ಮತ್ತು ಲೈಂಗಿಕ ವರ್ತನೆಗಳನ್ನು ಪಾಶ್ಚಿಮಾತ್ಯ ರೀತಿಯ ಅರ್ಥೈಸುವಿಕೆ ಹಾಗು ರಾಚನಿಕತೆಗಳ ಮುಖಾಂತರ ಪರಿಕಲ್ಪಿಸಿಕೊಂಡು ಕಾರ್ಯಕ್ರಮ ಸಿದ್ಧಪಡಿಸಿರುವುದು ಕಂಡು ಬರುತ್ತದೆ. ಲೈಂಗಿಕತೆ ಮತ್ತು ಲೈಂಗಿಕ ವರ್ತನೆಯ ಕುರಿತಾದ ಇಡೀ ವ್ಯಾಖ್ಯಾನ ಮತ್ತು ತಡೆ ಕಾರ್ಯತಂತ್ರಗಳು ಪಾಶ್ಚಿಮಾತ್ಯ ಚಿಂತನೆ ಅವರ ವ್ಯಕ್ತಿಗತ ಪ್ರತ್ಯೇಕತೆ ವ್ಯಕ್ತಿತ್ವಗಳು ಮತ್ತು ಲೈಂಗಿಕತೆ ಹಿನ್ನೆಲೆಯಲ್ಲಿ ಮೂಡಿ ಬಂದಂತಹವಾಗಿದೆ. ಲಿಂಗ ಅನನ್ಯತೆಗಳು, ಲೈಂಗಿಕ ಪಾತ್ರಗಳು ಮತ್ತು ವ್ಯಕ್ತಿಗತಿ ಅನನ್ಯತೆಗಳು ಮನೋ ಸಾಮಾಜಿಕ ಮತ್ತು ಐತಿಹಾಸಿಕ ಸನ್ನಿವೇಶದಿಂದ ಹುಟ್ಟುತ್ತವೆ. ನಾವು ಯಾರು, ನಾವೇನು; ನಾವು ಏನು ಮಾಡುತ್ತೇವೆ ಎಂಬ ಬಗೆಗಿನ ಗ್ರಹಿಕೆಗಳಿಗೆ ವಿಭಿನ್ನ ಸಂಸ್ಕೃತಿಗಳಲ್ಲಿ ವಿಧ ವಿಧ ಅರ್ಥಗಳು ಇರುತ್ತವೆ.



ಎಚ್ ಐ ವಿ ಹರಡುವಿಕೆಯ ಕ್ಷಿಪ್ರಗತಿಯು ಕೆಲವು ತುರ್ತು ಅತ್ಯಗತ್ಯಗಳನ್ನು ಹುಟ್ಟುಹಾಕಿದೆ. ಏಡ್ಸ್‌ಗೆ ನಿರ್ದಿಷ್ಟ ಚಿಕಿತ್ಸೆ ಸಾಧ್ಯವಿಲ್ಲದೇ ಇರುವುದು ಸರ್ಕಾರಗಳಿಗೆ ಸೋಂಕು ತಡೆ ಕಾರ್ಯಕ್ರಮಗಳಿಗೆ ಪ್ರಾಶಸ್ತ್ಯ ನೀಡುವಂತಾಗಿದೆ. ನಿಜವಾಗಿ ಹೇಳಬೇಕೆಂದರೆ ಕೇವಲ ಎರಡೇ ಸೋಂಕು ತಡೆ ಸಂದೇಶಗಳು ಇರುವುದು :
(1) ಅದನ್ನು ಮಾಡಬೇಡ
(2) ಮಾಡುವುದಾದರೆ ಆದರೆ ಸುರಕ್ಷತೆ ಇರಲಿ.

ಮೊದಲ ಧೋರಣೆ - ಅದನ್ನು ಮಾಡಬೇಡ ಎಂಬುದಕ್ಕೆ ಲೈಂಗಿಕ ವರ್ತನೆಗೆ ಸಂಬಂಧಿಸಿದಂತೆ ಹೆಚ್ಚು ಬೆಂಬಲವಿದೆ. ಅದನ್ನೆ ಇಷ್ಟಪಡಲು ಕಾರಣ ಅದಕ್ಕೆ ಅಂಟಿಕೊಂಡಿರುವ ನೈತಿಕತೆ. ಸರ್ಕಾರಿ ಹಾಗು ಸರ್ಕಾರೇತರ ಸಂಸ್ಥೆಗಳೆರಡು ಅದರಲ್ಲೂ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಈ ಧೋರಣೆಯನ್ನೇ ಬಳಸಲಾಗುತ್ತದೆ, ಗ್ರಹೀತ ಐತಿಹಾಸಿಕ ಸ್ಥಿತಿಗತಿಗೆ ಹೋಲಿಸಿ ಪಾಶ್ಚಿಮಾತ್ಯ ಪ್ರಭಾವದಿಂದ ಕಲುಷಿತಗೊಂಡ ಬಗ್ಗೆ ಹೇಳಲಾಗುತ್ತದೆ. ಅಂದರೆ, ಅಪಾಯಕಾರಿ ಲೈಂಗಿಕ ವರ್ತನೆಯ ಅಭ್ಯಾಸಗಳು ದಕ್ಷಿಣ ಏಷಿಯದಲ್ಲಿ ಪಾಶ್ಚಿಮಾತ್ಯ ಪ್ರಭಾವದಿಂದಾಗಿ ಹುಟ್ಟಿದಂತಹವು ಎಂದು ಹೇಳಲಾಗುತ್ತದೆ. ಈ ಕಾರ್ಯತಂತ್ರಿಕ ಮತ್ತೊಂದು ಮುಖ್ಯ ಎಂದರೆ ಅದನ್ನು ಮಾಡಬೇಡ ಎಂದು ಹೇಳಲು ಕೆಲವು ನಿರ್ದಿಷ್ಟ ಧಾರ್ಮಿಕ ಮತ್ತು ಸನಾತನಗ್ರಂಥಗಳ ಆಧಾರ, ಬೆಂಬಲ ಹೊಂದುವುದು. ಈ ಎರಡೂ ಧೋರಣೆಗಳು ಉಪಯೋಗವಾಗುವುದಿಲ್ಲ. ಮೊದಲನೆಯಾದಾಗಿ, ಲೈಂಗಿಕ ಇತಿಹಾಸದ ಬಗ್ಗೆ ಈ ರಾಷ್ಟ್ರಗಳಲ್ಲಿ ನಿರಾಕರಣೆ ಇದೆ, ಮತ್ತು ವಿಕೃತ ರೀತಿಯಲ್ಲಿ ಈ ನಿರಾಕರಣೆ ಮತ್ತು ಅಂತಹ ಇತಿಹಾಸಗಳ ಹತ್ತಿಕ್ಕುವಿಕೆ ಮಾಡಲಾಗುತ್ತದೆ. ಪಾಶ್ಚಿಮಾತ್ಯ ಸನ್ನಿವೇಶ ಹಿನ್ನೆಲೆಯಲ್ಲಿ ಇದು ಹುಟ್ಟಿಕೊಂಡುದು ಎಂದು ಹೇಳಿ ಬಿಡಲಾಗುತ್ತದೆ. ಇದು ಈ ರಾಷ್ಟ್ರಗಳ ಅಳಕು ಸಾಂಸ್ಕೃತಿಕ ಚೌಕಟ್ಟಿನ ಭಾಗ. ಅಂತೆಯೇ ದಕ್ಷಿಣ ಏಷಿಯಾದಲ್ಲಿ, ವಿವಾಹಿತರ ಲೈಂಗಿಕ ಸಂಬಂಧ, ವಿವಾಹಪೂರ್ವ ಲೈಂಗಿಕತೆ ಇಲ್ಲವೇ ಇಲ್ಲ ಎನ್ನುತ್ತಾರೆ. ಅಥವಾ ಇದ್ದರೂ ಅದರ ಪ್ರಮಾಣ ಅತ್ಯಲ್ಪ ಮಟ್ಟದ್ದು ಎನ್ನುತ್ತಾರೆ. ಆದರೆ ನೈಜ ಸ್ಥಿತಿ ಅದಲ್ಲಿ ಪುರಾವೆಗಳು ಅದರ ಸ್ಥಿತಿಯನ್ನು ಬಯಲು ಮಾಡುತ್ತವೆ ಹಾಗು ನಿಜಾಂಶ ಪೂರ್ಣವಾಗಿ ಬೇರೆಯೇ ಆಗಿದೆ.

ಧಾರ್ಮಿಕ ಮತ್ತು ಸನಾತನ ಗ್ರಂಥಗಳಿಂದ ಉದ್ಧೃತ ಮಾಡಿ ಬಳಸುವ ತಡೆ ವಿಧಾನಗಳ ಬಳಕೆ ನಿಜವಾದ ವರ್ತನೆಯನ್ನು ನಿರಾಕರಿಸುತ್ತದೆ. ಅಲದೇ ಇದರ ಬಳಕೆ ಮತ್ತು ನಿರಾಕರಣೆ ಧರ್ಮಗಳ ಇತಿಹಾಸ ಮತ್ತು ಅವರ ಸಾಮಾಜಿಕ ಸಂಪರ್ಕಗಳು. ಅವು ಅಸ್ತಿತ್ವದಲ್ಲಿರುವಂತೆ ಮಾಡುತ್ತದೆ. ಹಿಂದು, ಮುಸ್ಲಿಂ, ಕ್ರೈಸ್ತ, ಸಿಖ್, ಬುದ್ದ ಇತ್ಯಾದಿ ಯಾವುದೇ ಪಂಥಿಯಾನಾಗಲಿ ಯಾವತ್ತು ತಮ್ಮ ವರ್ತನೆಗಳನ್ನು ನಿಲ್ಲಿಸಿಲ್ಲ. ಅದೂ ಅಲ್ಲದೆ ಯಾವುದೇ ನಿರ್ದಿಷ್ಠ ಪಂಥದ ಬಗ್ಗೆ ನಂಬಿಕೆ ಇಲ್ಲದವರ ಕತೆಯೇನು? ಈ ವಿಷಯದಲ್ಲಿ ಸತ್ಯಾಂಶವೆಂದರೆ ದಕ್ಷಿಣ ಏಷಿಯಾ ಸಂಸ್ಕೃತಿಗಳು. ಖಾಸಗಿ ಮತ್ತು ಸಾರ್ವಜನಿಕ ಸ್ಥಳಗಳ ನಾಟಕೀಯ ವ್ಯತ್ಯಾಸಗಳನ್ನು ಆಧರಿಸಿದ್ದು ನಾಚಿಕೆ ಮತ್ತು ಗೌರವ ಪರಿಕಲ್ಪನೆಗಳಿಂದ ನಿರ್ಬಂಧಿಸಿದೆ. ಇವು ಅಪಾಯಕಾರಿ ಲೈಂಗಿಕ ವರ್ತನೆಗೆ ಪ್ರೇರೇಪಿಸುವಂತಹುದಾಗಿದ್ದು ಮನೋ ಸಾಮಾಜಿಕವಾಗಿ ಕಾಣಿಸದೇ ಹೋಗುತ್ತದೆ. ಸಂಸ್ಕೃತಿ, ಧರ್ಮ, ಪಾಶ್ಚಿಮಾತ್ಯ ವಿರೋಧಿ ಸಾರ್ವಜನಿಕ ಸಂದೇಶಗಳು. ಅಪೇಕ್ಷಿತ ಪರಿಣಾಮ ನೀಡುವುದಿಲ್ಲ. ಏಕೆಂದರೆ ಅವು ಲೈಂಗಿಕ ವರ್ತನೆಯ ರಾಜನಿಕತೆಯನ್ನು ನಿರ್ಲಕ್ಷಿಸುತ್ತವೆ. ಅಥವಾ ಜನ ತಮಗೆ ಬೇರಾವುದನ್ನು ಏಕೆ ಮಾಡುತ್ತಾರೆ? ಹೇಗೆ ಮಾಡುತ್ತಾರೆ? ಯಾವಾಗ? ಎಲ್ಲಿ? ಯಾರಿಗೆ?

ಲೈಂಗಿಕ ವರ್ತನೆಗಳು ತಾನೇ ತಾನಾಗಿ ಹುಟ್ಟಿಕೊಂಡು ಅಭ್ಯಾಸವಾಗಿ ಬಿಡುವುದಿಲ್ಲ. ಅದಕ್ಕೆ ಸನ್ನಿವೇಶ, ಇತಿಹಾಸ ಎರಡೂ ಇದ್ದು ಸಮಯ ಮತ್ತು ಸ್ಥಳ ಎರಡನ್ನೂ ಆಧರಿಸಿರುತ್ತವೆ. ಹಾಗು ಆಕಾಂಕ್ಷೆಯಿಂದ ಹುಟ್ಟುತ್ತವೆ ಮತ್ತು ಈ ಹುಟ್ಟುವಿಕೆಯ ರಚನೆಯು ಸಾಂಸ್ಕೃತಿಕ ಮತ್ತು ಸಾಮಾಜಿಕ ಚಲನಶೀಲತೆಯನ್ನು ಆಧರಿಸಿರುತ್ತದೆ.

ಉದಾಹರಣೆಗೆ, ಹೆಣ್ಣು ಮಕ್ಕಳು ಮತ್ತು ಹುಡುಗಿಯರ ಮೇಲೆ ಕಟ್ಟುಪಾಡಿರುವಂತಹ ಸಂಸ್ಕೃತಿಯಲ್ಲಿ ಅವರ ವರ್ತನೆ, ಅದರಲ್ಲೂ ಲೈಂಗಿಕ ವರ್ತನೆ ಮೇಲೆ ಸದಾ ಒಂದು ಕಾವಲುಗಣ್ಣು ಇರುತ್ತದೆ. ಅಲ್ಲಿ ಕನ್ಯತ್ವಕ್ಕೆ ಮನ್ನಣೆ, ಮನೆ ಮತ್ತು ಸಮುದಾಯದ ಮರ್ಯಾದೆಗೆ ಪ್ರಾಶಸ್ತ್ಯ ಪುರುಷರಿಗೆ ಪ್ರತ್ಯೇಕ ಸಾಮಾಜಿಕ ಸ್ಥಾನ. ಇಲ್ಲಿ ಮದುವೆ ಮತ್ತು ಸಂತಾನೋತ್ಪತ್ತಿ ಕಡ್ಡಾಯ, ವಯಸ್ಕ ಸ್ಥಿತಿಯನ್ನು ಈ ಎಲ್ಲ ಮಾಪನ ಸೂಚಕಗಳಿಂದಲೇ ಅಳೆಯಲಾಗುತ್ತದೆ. ಒಂದು ಸಂಸ್ಕೃತಿ ಅದರಲ್ಲೂ ಏಕರೂಪ ಸಮಾಜವಿರುವೆಡೆ, ವರಮಾನ ಕಡಿಮೆಯಿದ್ದ ಮಹಿಳೆಯ ಲೈಂಗಿಕ ವಾಂಛೆಯನ್ನು ಕಡೆಗಣಿಸಿರುವೆಡೆ, ಹೆಚ್ಚು ಮಿತಿಗಳು ಮತ್ತು ಕೆಲವೊಮ್ಮೆ ದುಬಾರಿಯಾಗಿದ್ದು, ಎಲ್ಲಿ ಲೈಂಗಿಕ ವರ್ತನೆಗಳು ವೈಯುಕ್ತಿಕ ಅನನ್ಯತೆ ಸುತ್ತ ಕಟ್ಟಿಕೊಂಡಿಲ್ಲದೆ ಇದ್ದು ಬದಲಿಗೆ ಸಂಭೋಗ ನಡೆಸುವವ ಮತ್ತು ಸಂಭೋಗಕ್ಕೆ ಒಳಗಾಗುವ ಎಂಬುದರ ಸುತ್ತ ಬೆಳೆದಿದೆಯೋ, ಎಲ್ಲ ಯೋನಿ ಶಿಶ್ನೇತರ ಲೈಂಗಿಕತೆಯನ್ನು ಲೈಂಗಿಕತೆಯಾಗಿ ಕಾಣದೇ ಅದನ್ನೊಂದು ಆಟ ಎಂದು ತಿಳಿಯಲಾಗುತ್ತದೋ ಅಂತಹ ಕಡೆ ಯಾರು ಸದಾ ಲೈಂಗಿಕವಾಗಿ ಲಭ್ಯವಿರುವ ವಸ್ತು?

ಲಿಂಗ ರಾಜಕೀಯತೆಗಳ ಇತಿಹಾಸದ ನಿರಾಕರಣೆ, ಲೈಂಗಿಕತೆಗಳು ಮತ್ತು ಲೈಂಗಿಕ ವರ್ತನೆಗಳ ಬಗೆಗೆ ಇರುವ ವ್ಯಾಖ್ಯಾನಗಳು ಅದು ಪಾಶ್ಚಿಮಾತ್ಯವಾಗಲಿ, ದಕ್ಷಿಣ ಏಷಿಯಾದ್ದಾಗಲಿ ಲಿಂಗ ಅನನ್ಯತೆ ಮತ್ತು ದಕ್ಷಿಣ ಏಷಿಯಾದಲ್ಲಿ ಲೈಂಗಿಕತೆ ಎಂಬುದರ ಪರಿಕಲ್ಪನೆ ಅರ್ಥಮಾಡಿಕೊಳ್ಳುವುದರ ಮೇಲೆ ಕ್ರೇಂದ್ರಿತ ಪ್ರಭಾವ ಇರುತ್ತದೆ. ಯಾವುದೇ ಭಾರತೀಯ ಸಂಸ್ಥೆ ಈ ನಿರಾಕರಣೆ ಕುರಿತು ಅಧ್ಯಯನ ನಡೆಸಿಲ್ಲ. ಬದಲಿಗೆ ಈ ಇತಿಹಾಸಗಳ ಅಗೋಚರತೆಯನ್ನು ಶಾಶ್ವತಗೊಳಿಸಿವೆ. ಜೊತೆಗೆ, ಇದೀಗ ಚಾಲ್ತಿಯಲ್ಲಿರುವ ಪಾಶ್ಚಿಮಾತ್ಯ ಪ್ರಭಾವದ ಪ್ರಸಕ್ತ ಲೈಂಗಿಕ ರಚನೆಯ ಹುಟ್ಟು ಪರಿಹಾಸಿಕವಲ್ಲದ್ದು ಮತ್ತು ಸುಸಂಗತ ಎಂದು ಕಾಣಲಾಗುವ ಲೈಂಗಿಕತೆ ಎಂದರೆ ವಿಭಿನ್ನಲಿಂಗಿಗಳ ಸಂಭೋಗ ಮಾತ್ರವಾಗಿದ್ದು ಇನ್ನಿತರ ಯಾವುದೇ ಪ್ರಕಾರವನ್ನು ಅಡ್ಡದಾರಿ ಎಂದೊ ಅಥವಾ ಪಾಶ್ಚಿಮಾತ್ಯ ಎಂದೋ ಹೇಳಿ ಬಿಡಲಾಗುತ್ತದೆ.

ಈ ರೀತಿಯ ನೋಡುವಿಕೆ ಲೈಂಗಿಕತೆಯ ಇತಿಹಾಸದ ಸಮೃದ್ಧತೆಯನ್ನು ಕಡಿಮೆ ಮಾಡುತ್ತದೆ. ಅಲ್ಲದೆ ಸಲಿಂಗ ಕಾಮ ವಿಭಿನ್ನ ಲಿಂಗ ಕಾಮದ ಪರಿಕಲ್ಪನೆಗಳ ನಡುವೆ ವಿರೋಧಾತ್ಮಕ ಬೇರ್ಪಡೆ ಉಂಟು ಮಾಡುತ್ತದೆ. ಸಲಿಂಗಕಾಮ, ವಿಭಿನ್ನಲಿಂಗ ಕಾಮದ ಪರಿಕಲ್ಪನೆಗಳು ಪಾಶ್ಚಿಮಾತ್ಯ ಚೌಕಟ್ಟು ಮತ್ತು ಲೈಂಗಿಕತೆ ಅರ್ಥೈಸುವಿಕೆಯ ಪರಿಣಾಮವಾಗಿದ್ದು ಆ ದೃಷ್ಟಿಯಿಂದ ನೋಡಿದರೆ ಇಲ್ಲಿಯ ಲೈಂಗಿಕ ಇತಿಹಾಸ ಸಮೃದ್ಧತೆ ಕಳೆದುಕೊಳ್ಳುತ್ತದೆ.

ಅದರ ಜೊತೆಗೆ, ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯ ರಚನೆ, ಕಡ್ಡಾಯ ಮದುವೆಯ ಹೇರಿಕೆ, ಗಂಡು ಸಂತಾನವೇ ಬೇರೆಂಬ ಹಂಬಲ, ಹಾಗೂ ಶತಮಾನಗಳಿಂದಲೂ ಕೆಲವೊಂದು ಪಾರಂಪರಿಕ ಚೌಕಟ್ಟುಗಳಿಂದ ಹರಿದು ಬಂದಿರಯವ ಲೈಂಗಿಕ ವರ್ತನೆ ಮತ್ತು ವಾಂಛೆಗಳು ಒಂದು ರೀತಿಯ ವಿಧ್ವಂಸಕ ವಿನ್ಯಾಸ, ಕಡೆಗಣಿಸುವಿಕೆ ಮತ್ತು ಪರ್ಯಾಯ ಲೈಂಗಿಕತೆಗಳ ಬಗ್ಗೆ ನಿರಾಕರಣೆ ಅದರ ಇತಿಹಾಸದ ನಿರಾಕರಣೆಗೆ ಕಾರಣವಾಗಿದೆ. ಒಂದು ಪ್ರಮುಖ ಲೈಂಗಿಕತೆ ಹಿತಿಹಾಸಿಕವಾಗಿ ಹೊರಹೊಮ್ಮಿದ್ದು ಅವು ಇತರ ಎಲ್ಲ ಪದ್ಧತಿಗಳ ಮೇಲೆ ಪ್ರಾಧಾನ್ಯ

ಹೊಂದಿ ಸಾಮಾಜಿಕ ಹಿಡಿತ ಹೊಂದಿದ ಪದ್ಧತಿಯಾಗಿ ಪುರುಷನನ್ನು ಸಮಾಜದ ಏಕೈಕ ಪಾತ್ರವಾಗಿ ಮೂಡಿ ಪುರುಷ ಶಕ್ತಿಯನ್ನು ಬಲಾಢ್ಯಗೊಳಿಸಿದೆ.

ಪರ್ಯಾಯ ಇತಿಹಾಸಗಳು ಆಗಿಲದಾಗ್ಗೆ ರೂಪುಗೊಂಡರೂ ಕೆಲ ಹಂತಗಳಲ್ಲಿ ಗ್ರಾಮೀಣ ಮಟ್ಟದ ಸಂತಾನೋತ್ಪತ್ತಿ ಆದರ್ಶ ಸಿದ್ಧಾಂತಗಳ ಮೇಲಾಟದಿಂದಾಗಿ ಅವು ಕಾಣೆಯಾಗಿದೆ. ಅಲ್ಲದೆ ವಿಭಿನ್ನ ಲಿಂಗ ಸಂತಾನೊತ್ಪತ್ತಿ ಆಧಾರದ ಯಾವುದೇ ಸಂಪ್ರದಾಯ ಹೆಚ್ಚಾಗಿ ರೊಪುಗೋಂಡು ಪರ್ಯಾಯ ಇತಿಹಾಸ ಕಾಣೆಯಾಗಲು ಕಾರಣವಾಗಿದೆ. ಹಳೆಯ ಪರ್ಯಾಯ ಪುರಾಣಗಳು ಮತ್ತು ಇತಹಾಸಗಳು ಯುಕ್ತಿಯಿಂದ ಬದಲಾವಣೆಗೊಂಡಿದೆ, ವಿರೂಪಗೊಂಡಿದೆ. ಅದನ್ನು ಗ್ರಾಮೀಣಾ ಪುರುಷ ಆದರ್ಶಗಳಿಗೆ ತಕ್ಕಂತೆ ಬದಲಾಯಿಸಲಾಗಿದೆ. ಅದರಿಂದ ಮಹಿಳೆಯನ್ನು ಸಂಪ್ರದಾಯದ ಆಗರವಾಗಿರುವಂತೆ ಮಾಡಲಾಯಿತೆ ಹೊರತು ಆಕೆ ಅವುಗಳ ವ್ಯಾಖ್ಯಾನಕಾರಳಾಗಿ ಅಲ್ಲ. ಇದು ಗ್ರಾಮೀಣ ಆರ್ಥಿಕತೆ ಹುಟ್ಟುಹಾಕಿತು. ಅಲ್ಲಿ ಕೂಲಿಯ ಬೇರ್ಪಡೆ, ಗ್ರಾಮೀಣ ಬಂಡವಾಳವಾಗಿ ಗಂಡು ಸಂತಾನ, ಭೂಮಿ ಮೇಲೆ ಒಡೆತನ ಪುರಷರಿಂದ ಆರ್ಥಿಕ ಮತ್ತು ಸಾಂಸ್ಕೃತಿಕ ಸಂಪನ್ಮೂಲಗಳು ರೂಪುಗೊಂಡಿದೆ. ಇವೇ ನಗರದೊಳಗೆ ಮರುಹುಟ್ಟು ಪಡೆದಿದೆ. ಇದೂ ಕೂಡ ವಾಂಛೆ ಮತ್ತು ಲೈಂಗಿಕತೆ ಗ್ರಾಮೀಣ ಪುರುಷ ಪ್ರಧಾನ ಧೋರಣೆಯಿಂದ ರೂಪು ಪಡೆದು ಕೊಳ್ಳುವುದಕ್ಕೆ ಕಾರಣವಾಗಿದೆ. ಅಲ್ಲದೆ ವಿವಿಧ ನಗರ ವ್ಯಾಖ್ಯಾನಗಳಲ್ಲಿ ಇದಕ್ಕೆ ಸಾಂಪ್ರದಾಯಿಕ ಖಚಿತತೆಯೊಂದಿಗೆ ರಮ್ಯತೆಯ ಮೆರುಗು ನೀಡಲಾಯಿತು. ಅಂದರೆ, ಪರ್ಯಾಯ ಲೈಂಗಿಕತೆ ಮತ್ತು ಮಾತೃ ಆಧಾರಿತ ಪರಂಪರೆಗಳ ನಿರಾಕರಣೆಯನ್ನು ಶಾಶ್ವತವಾಗಿ ಉಳಿಯುವಂತಾಯಿತು.

ಅದರೊಂದಿಗೆ ವೇದಗಳ ಕಾಲದಿಂದ ಹಿಡಿದು ವಿವಿಧ ರೀತಿಯ ವಸಾಹತು ಪದ್ಧತಿಗಳ ಪ್ರಭಾವ, ಏಕೇಶ್ವರವಾದ, ಪೌರತ್ಯವಾದ, ವಿವಿಧ ಬಗೆಯ ರಾಷ್ಟ್ರೀಯವಾದ ಮೂಲಭೂತವಾದ ಸಂಪ್ರದಾಯ ನಿಷ್ಠೆ ಇತ್ಯಾದಿ ಎಲ್ಲವೂ ಸ್ಥಳೀಯವಾದ ಪರ್ಯಾಯ ಸಂಪ್ರದಾಯಗಳ, ಸಾಹಿತ್ಯ, ದೃಶ್ಯಕಲೆ, ಹಾಡುಗಳು ಮತ್ತು ಜೀವನ ಶೈಲಿಗಳೇ ಆದರೂ ಎಲ್ಲದರ ಮೇಲೆ ಪರಿಣಾಮ ಬೀರಿತು. ಇದು ಒಂದು ರೀತಿ ಪರ್ಯಾಯ ಲೈಂಗಿಕತೆಗಳ ಪೂರ್ಣ ಅಗೋಚರತೆನ್ನು ಉಂಟುಮಾಡಿತು. ಅನೇಕತ್ವದ ದೃಷ್ಟಿ ಹುಟ್ಟುವ ಬದಲಿಗೆ ಕೇವಲ ಸಂತಾನೊತ್ಪತ್ತಿ ಪರವಾದ ಮತ್ತು ಶಿಶ್ನ ಸಂಭೋಗದ ಲೈಂಗಿಕತೆ ಮಾತ್ರ. ಸಾಮಾಜಿಕ ಸಮ್ಮತಿ ಪಡೆಯಿತು. ಲೈಂಗಿಕ ವೈವಿಧ್ಯದ ಅಭಿವ್ಯಕ್ತಿಯ ಪದ್ಧತಿ ಪರಂಪರೆಗಳನು ಕೊಳಕು, ಅಡ್ಡದಾರಿ ಮತ್ತು ವಿಕೃತಿ ಎಂಬಂತೆ, ಅನಿಷ್ಠ, ಕಾಮುಕತೆ ಮತ್ತು ಹೆಣ್ಣನ್ನು ಕಳಿಸುವಂತಹುದು ಎನ್ನುವಂತೆ ಕಾಣಲಾಯಿತು.

ಈ ಅಗಾಧ ನಿರಾಕರಣೆ ಮತ್ತು ಲೈಂಗಿಕ ಇತಿಹಾಸಗಳು ಹಾಗು ಸಂಸ್ಕೃತಿಗಳ ಬಾಯಿ ಮುಚ್ಚಿಸುವಿಕೆ ಏನು ಅರ್ಥ ಕೊಟ್ಟಿದೆ ಎಂದರೆ ಯಾವುದಾದರೂ ಚೌಕಟ್ಟು ಲಭ್ಯವಿದ್ದರೆ ಅದು ಪಾಶ್ಚಿಮಾತ್ಯ ರಾಷ್ಟ್ರಗಳಿಂದ ರೂಪುಗೊಂಡಿರಬಹುದು ಮಾತ್ರ ಎಂಬಂತಾಗಿದೆ. ಆದರೆ ಈ ಪಾಶ್ಚಿಮಾತ್ಯ ಚೌಕಟ್ಟುಗಳು ತೌಲನಿಕ ಸಾಧನಗಳಾಗಿ ಬಳಕೆಯಾಗಬಹುದೇ ವಿನಹ ಅವು ದಕ್ಷಿಣ ಏಷಿಯಾದ ಸಂಕೀರ್ಣವಾದ ಮನೋಲೈಂಗಿಕ ಸಾಮಾಜಿಕ ಹಂದರವನ್ನು ಅರ್ಥ ಮಾಡಿಕೊಳ್ಳಲು ಮುಖ್ಯ ಆಧಾರವಾಗಿ ಬಳಸಲು ಸಾಧ್ಯವಿಲ್ಲ.

ದಕ್ಷಿಣ ಏಷಿಯಾದಲ್ಲಿ ವ್ಯಕ್ತಿ ಪಡಿಸಲಾಗಿರುವ ದೇಹ ಮತ್ತು ಲೈಂಗಿಕತೆಯ ಪ್ರಾಪಂಚಿಕ ದೃಷ್ಟಿಯು. ವೇದಕಾಲದ ಬ್ರಾಹ್ಮಣತ್ವ, ಮುಸ್ಲಿಂ, ಕ್ರೈಸ್ತ ಹಾಗೂ ಆಯುರ್ವೆದ ಮತ್ತು ಪಾಶ್ಚಿಮಾತ್ಯ ವೈದ್ಯಕೀಯದ ಕೇಂದ್ರ ಪರಿಕಲ್ಪನೆಗಳಿಂದ

ರೂಪುಗೊಂಡಂತಹವು. ಪುರುಷ ಮತ್ತು ಮಹಿಳೆಯ ಪಾತ್ರಗಳನ್ನು ನಿಖರವಾಗಿ ವ್ಯಾಖ್ಯಾನಿಸಲಾಗಿದೆ ಸಾರ್ವಜನಿಕವಾಗಿ ಅದನ್ನು ಉಲ್ಲಂಘಿಸಿದವರನ್ನು ತೀವ್ರವಾಗಿ ಶಿಕ್ಷಿಸಲಾಗುತ್ತಿತ್ತು. ಕಳಂಕ ಹಚ್ಚುವ ಮೂಲಕ, ಸಾಮಾಜಿಕ ಬಹಿಷ್ಕಾರ, ಗಡಿಪಾರು, ದೈಹಿಕ ನಿಂದನೆ ಮತ್ತು ಮರಣದಂಡನೆ ಹೀಗೆ ಶಿಕ್ಷಿಸುವ ಮೂಲಕ ಅಂಕೆಯಲ್ಲಿಡಲಾಗುತ್ತಿತ್ತು.

ಹೀಗೆ ರೂಪುಗೊಂಡ ಮನೋ - ಸಾಮಾಜಿಕ ಲೈಂಗಿಕ ರಚನೆಗಳು, ಲೈಂಗಿಕತೆಯ ವಿವಿಧ ಅಭಿವ್ಯಕ್ತಿಗಳ ನಿರಾಕರಣೆ , ಲೈಂಗಿಕತೆಯ ಸಾಮಾಜ - ರಾಜಕೀಯ ಹಿಡಿತ ಎಂತಹ ಸಾಂಸ್ಕೃತಿಕ ಅಭಿವೃದ್ಧಿಗೆ ಕಾರಣವಾಯಿತೆಂದರೆ, ಕಡ್ಡಾಯ ಮದುವೆ ಮತ್ತು ಸಂತಾನ, ಪ್ರಾಧಾನ್ಯ ಪಡೆಯಿತು. ಮದುವೆಯಾಗದ ಹೆಣ್ಣಿಗೆ, ಸ್ವತಂತ್ರವಾಗಿ ಜೀವಿಸುವ ಹೆಣ್ಣಿಗೆ ಸಾಮಾಜಿಕವಾಗಿ ಸ್ಥಾನ ಇಲ್ಲದಂತಾಯಿತು. ಯಾವುದೇ ಸಾಮಾಜಿಕ ಸ್ಥಾನ ಇರುವುದಾದರೆ ಜವಾಬ್ದಾರಿ ಇರುವುದಾದರೇ ಅದು ಕೇವಲ ವಿವಾಹಿತರಿಗೆ ಮಾತ್ರ ಎಂಬಂತಹ ವಾತಾವರಣ ನಿರ್ಮಾಣಕ್ಕೆ ಕಾರಣವಾಯಿತು. ಲೈಂಗಿಕ ವರ್ತನೆ ಲೈಂಗಿಕತೆಯ ಜಾಗವನ್ನು ಪಡೆಯುತ್ತದೆ. ಮಹಿಳೆಯ ಲೈಂಗಿಕ ವರ್ತನೆ ನಿರಾಕರಿಸದಿದ್ದರೂ ಪೂರ್ಣವಾಗಿ ನಿಯಂತ್ರಿಸಲ್ಪಟ್ಟಿತು ಮತ್ತು ಕಡೆಗಣಿಸಲ್ಪಟ್ಟಿತು. ಪುರುಷ ಲೈಂಗಿಕ ವರ್ತನೆ ಸ್ವಯಂ ನಿಯಂತ್ರಣಕ್ಕೆ ಒಳಪಟ್ಟಿಸಿಲ್ಲದೇ ಅದು ಮತ್ತೊಬ್ಬ ವ್ಯಕ್ತಿಯನ್ನು ಹೊಂದುವ ವಾಂಛೆಯಾಗಿ ಆಗುವ ಬದಲು ಅದೊಂದು ಕರ್ತವ್ಯ ನಿರ್ವಹಣೆಯ ವಿಷಯವಾಯಿತು. ಲೈಂಗಿಕ ವರ್ತನೆ ವೈಯಕ್ತಿಕೆಯಿಂದ ಹೊರತಾಯಿತು. ಲೈಂಗಿಕತೆಗೆ ರಚನೆ ಇಲ್ಲದಂತಾಯಿತು. ಲೈಂಗಿಕ ಕ್ರಿಯೆ ಗಂಡು ಹೆಣ್ಣಿನ ನಡುವೆಯಾಗಲಿ, ಗಂಡು ಗಂಡಿನ ನಡುವೆಯಾಗಲಿ ಒಂದು ಕ್ರೂರ ವರ್ತನೆ ಎಂಬಂತಾಯಿತು. ಹೆಣ್ಣು ಬೇರೊಬ್ಬ ಹೆಣ್ಣನ್ನು ಇಷ್ಟಪಡುವಂತಹ ವಿಷಯಕ್ಕೆ ಸಮಾಜದಲ್ಲಿ ಸ್ಥಾನವೇ ಇಲ್ಲ. ವೈಯಕ್ತಿಕ ಆಯ್ಕೆ, ಖಾಸಗೀತನ ಮೊದಲಾದ ಪರಿಕಲ್ಪನೆಗಳು ಕಾಣೆಯಾಗಿದ್ದು ಅಲ್ಲಿ ಸ್ವಂತಿಕೆಯ ಬೆಳವಣಿಗೆ ಸಾಧ್ಯವೇ ಇಲ್ಲ ಎಂಬಂತಾಯಿತು.

ವಾಂಛೆಗಳಿಗೆ ಇತಿಹಾಸವಿರುತ್ತದೆ. ಅದು ವೈಯಕ್ತಿಕವಾಗಿರಬಹುದು ಮತ್ತು ಸಾಮಾಜಿಕವಿರಬಹುದು. ಹಾಗೆಯೆ ರಾಜಕಿಯವಿರಬಹುದು. ಅವು ವ್ಯಕ್ತಿಗೊಂಡು ರೂಪು ಪಡೆದ ರೀತಿಯ ನ್ನಾಧರಿಸುತ್ತದೆ. ಅವು ಈ ಇತಿಹಾಸಗಳು ಬದಲಾದರೆ ಮತ್ತು ಮರು ರೂಪು ಪಡೆದ ಮಾತ್ರಕ್ಕೆ ಸ್ಥಗಿತಗೊಳ್ಳುವುದಿಲ್ಲ. ಅಥವಾ ಅಂತಹ ಇತಹಾಸಗಳನ್ನು ನಿರಾಕರಿಸಿದ ಮಾತ್ರಕ್ಕೆ ಕಾಣದಂತೆ ಮುಚ್ಚಿಹಾಕಿದ ಮಾತ್ರಕ್ಕೆ ಅವು ಇಲ್ಲವಾಗಿಬಿಡುವುದಿಲ್ಲ. ಆದರೆ ವಾಂಛೆಗಳು ಸಾಮಾಜಿಕ ರಚನೆಯೊಳಗೆ ಹೊಂದುವಂತೆ ರಚಿತವಾಗುತ್ತವೆ.

ಇದರ ಪರಿಣಾಮವಾಗಿ, ಲೈಂಗಿಕತೆ ಮತ್ತು ಅದರ ದೈಹಿಕ ಅಭಿವ್ಯಕ್ತಿಗೆ ಸಂಬಂಧಿಸಿದಂತೆ ದಕ್ಷಿಣ ಏಷಿಯಾದಲ್ಲಿ ಸಮಕಾಲೀನ ಸ್ಥಿತಿ ಏನನ್ನು ಸೂಚಿಸುತ್ತದೆಂದರೆ ವಿವಿಧ ಮಿಟ್ಟ ಗುದ ಮತ್ತು ಯೋನಿ ಹರಿಯುವಿಕೆಯಿಂದ ಲೈಂಗಿಕತೆಯ ಮಟ್ಟ ಕಾಣಲಾಗುತ್ತದೆ. ಅದು ಪುರುಷನಿಂದ ನಡೆವ ವಿವೇಚನಾರಹಿತ ಚಟುವಟಿಕೆ. ಅದಕ್ಕೆ ಯಾವುದೇ ರೂಪದ ವ್ಯಕ್ತಿತ್ವವಿರುವುದಿಲ್ಲ ಕೇವಲ ಲಭ್ಯತೆ ಮತ್ತು ಕರ್ತವ್ಯ ನಿರ್ವಹಣೆ ಪರಿಕಲ್ಪನೆ ಮೂಲಕ ನಡೆವ ಕ್ರಿಯ ಆಗುತ್ತದೆ. ತೀವ್ರ ರೀತಿಯ ಲೈಂಗಿಕ ನಿಗ್ರಹದಿಂದ ಉಂಟಾಗುವ ಕ್ರೂರ ಲೈಂಗಿಕ ಕಾಮನೆಯ ತಣಿಸುವಿಕೆಯ ಕ್ರಿಯೆ ಅಷ್ಟೆ ಆಗಿದೆ. ಆದರೆ ಹಲವು ಆದರ್ಶಗಳಿಂದಾದ ಭಯಂಕರ ಮೌನ ಮತ್ತು ನಿರಾಕರಣೆ ಇತಿಹಾಸಗಳಿಂದಾಗಿ ಒಂದೆ ರೀತಿ ಪೂರ್ಣ ಬಹಿಷ್ಕೃತ ವಾತಾವರಣ ರೂಪುಗೊಂಡು ಬಿಟ್ಟಿವೆ. ಈ ಬಹಿಷ್ಕೃತತೆಯನ್ನು ಪ್ರತಿರೋಧಿಸುವ ಪ್ರಯತ್ನದಲ್ಲಿ ಒಂದು ರೀತಿ ಗುಪ್ತ ಮತ್ತು ದ್ವಂದ್ವಾತ್ಮಕ ಸ್ಥಿತಿಯ ರೀತಿ

ಹೊರಹೊಮ್ಮಿದೆ. ಇದರಿಂದ ವ್ಯಕ್ತಿ ಸಮಾಜದೊಳಗೆ ಒಂದಾಗಿರಬೇಕೆಂಬ ಕಾರಣದಿಂದ ಮದುವೆಯಾಗುತ್ತಾನೆ ಮಕ್ಕಳನ್ನೂ ಪಡೆಯುತ್ತಾನೆ ಆದರೆ ತನ್ನ ಪರ್ಯಾಯ ಲೈಂಗಿಕ ವಾಂಛೆಗಳನ್ನು ಪರದೆಯೊಳಗೆ, ಕತ್ತಲಲ್ಲಿ, ನಾಚಿಕೆ ಮತ್ತು ಮೌನದೊಂದಿಗೆ ಅನುಭವಿಸುತ್ತಾನೆ.

ದಕ್ಷಿಣ ಏಷಿಯಾದಲ್ಲಿ ಲೈಂಗಿಕ ಆರೋಗ್ಯದ ಬಗ್ಗೆ ಪ್ರಸ್ತುತ ಇರುವ ಆತಂಕಗಳ ಹಿನ್ನೆಲೆಯಲ್ಲಿ (ಭಯ ಅಲ್ಲದಿದ್ದರೂ) ಅದರಲ್ಲೂ ವಿಶೇಷವಾಗಿ, ಅತ್ಯಾಚಾರ, ಗರ್ಭಕೊರಳು ಕ್ಯಾನ್ಸರ್, ಲೈಂಗಿಕ ರೋಗಗಳು, ಹೆಪಟೈಟಿಸ್ ಬಿ ಮತ್ತು ಸಿ, ಹಾಗು ಎಚ್ ಐ ವಿ ಸೋಂಕು ಅಲ್ಲದೇ ಮಹಿಳೆ ಮತ್ತು ಪುರುಷರ ಲೈಂಗಿಕ ಕ್ರಿಯೆಯಲ್ಲಿ ಹೆಚ್ಚಾಗುತ್ತಿರುವ ಅಸಮರ್ಪಕತೆ ಇವುಗಳಲ್ಲುದರ ಹಿನ್ನೆಲೆಯಲ್ಲಿ ನೋಡಿದಾಗ ಮೇಲೆ ಹೇಳಲಾಗಿರುವ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಪರಿಹಾರಕ್ಕೆ ಮುಂದಾಗುವುದು ಸದ್ಯ ತುರ್ತಿನ ಕೆಲಸ. ಪರ್ಯಾಯ ಲೈಂಗಿಕತೆಗಳು ಎದ್ದು ಕಾಣುವಂತೆ ಮಾಡಲು ಕಾರ್ಯತಂತ್ರಗಳ ರೂಪಣೆ ಅಂದರೆ ಸಮಕಾಲಿನ ಲೈಂಗಿಕತೆ ಚೌಕಟ್ಟು ಮುರಿದು ಐತಿಹಾಸಿಕ ಶೋಧಗಳ ಬೆಳಕಿನಲ್ಲಿ ಮರುನಿರ್ಮಾಣ ಮಾಡುವುದಕ್ಕೆ ಸಮರ್ಪಕ ಕಾರ್ಯತಂತ್ರಗಳನ್ನು ರೂಪಿಸಿಬೇಕು.

ಎಲ್ಲರೂ ತಮ್ಮಲ್ಲಿನ ಉತ್ತಮತೆಯನ್ನು ವ್ಯಕ್ತಪಡಿಸಲು ಸಾಧ್ಯವಾಗುವಂತಹ ಸಮಾಜದೆಡೆಗೆ ನಾವು ಹೆಜ್ಜೆ ಹಾಕಿದರೆ ಜನ ತಮ್ಮ ಲೈಂಗಿಕತೆ ಮತ್ತು ಭಾವನಾತ್ಮಕ ವಾಂಛೆಗಳನ್ನಾಧರಿಸಿ ಆಯ್ಕೆ ಮಾಡಲು ಮುಂದಾಗುವಂತಹ ಸ್ವಂತತನ ರೂಪುಗೊಳ್ಳಲು ಅವಕಾಶ ಒದಗಿಸದರೆ ಸಕಾರಾತ್ಮಕ ನಿರ್ಧಾರಗಳನ್ನು ಕೈಗೊಳ್ಳಲು ಅಂದರೆ ಅವರ ಮತ್ತು ಇತರರ ಲೈಂಗಿಕ ಆರೋಗ್ಯದ ಬಗ್ಗೆ ಸಕಾರಾತ್ಮಕ ನಿರ್ಧಾರ ತೆಗೆದುಕೊಳ್ಳುವಂತೆ ಸಶಕ್ತಗೊಳಿಸಿದರೆ, ಆಗ ಈ ಇಡಿ ಶೋಧಯಾನ ಸಾಮಾಜಿಕ ವಿಧಾಯಿಕವಾಗುತ್ತದೆ. ಇಂತಹ ಸಕಾರಾತ್ಮಕ ಆಯ್ಕೆಗಳ ಮೂಲಕ ಮಾತ್ರವೆ ಪರಿಣಾಮಕಾರಿ ಪಡೆ ಕಾರ್ಯಕ್ರಮಗಳ ಅಭಿವೃದ್ಧಿ ಸಾಧ್ಯ ಹಾಗು ಪುರುಷ ಮತ್ತು ಮಹಿಳಾ ಆರೋಗ್ಯ ಸಮಸ್ಯ ಕೂಡ ಕೈಗೆತ್ತಿಕೊಂಡು ಸೂಕ್ತ ಪರಿಹಾರ ನೀಡಬಹುದು.

**ಸಾರಾಂಶ**

ದಕ್ಷಿಣ ಏಷಿಯಾದ ಸಂಸ್ಕೃತಿಗಳೊಳಗೆ ವ್ಯಕ್ತಿಗತ ಅನನ್ಯತೆಗಳು ಸ್ವಂತ ತನದ ಮೇಲೆ ಆಧರಿಸಿಲ್ಲ, ಬದಲಿಗೆ ವಿಸ್ತಾರಿತ ಕುಟುಂಬವನ್ನು ಆಧರಿಸಿದೆ. ಇದು ಮಕ್ಕಳು, ಜೈವಿಕ ತಂದೆ ತಾಯಿಗಳು, ಚಿಕ್ಕಪ್ಪ ಚಿಕ್ಕಮ್ಮಂದಿರು, ಅಣ್ಣ ಮತ್ತು ಅತ್ತಿಗೆಯಿಂದ ಅವರ ಮಕ್ಕಳು ಹೀಗೆ ಎಲ್ಲರನ್ನು ಒಳಗೊಂಡ ಕುಟುಂಬ ವ್ಯಕ್ತಿ ಅನನ್ಯತೆಗೆ ಕಾರಣವಾಗುತ್ತದೆ. ಅಂದರೆ, ವಿಸ್ತಾರಿತ ಕುಟುಂಬ ಕಾರ್ಯ ಜಾಲದೊಳಗೆ ನಾವು ಎಲ್ಲಿಂದ ಬಂದೆವು ಮತ್ತು ಎಲ್ಲಿದ್ದೇವೆ ಎಂಬ ಪ್ರಜ್ಞೆ ಇರುತ್ತದೆ. ವ್ಯಕ್ತಿಗೆ ಕುಟುಂಬ ಮತ್ತು ಸಮುದಾಯ ಅನನ್ಯತೆ ಇರುತ್ತದೆ. ಆದರಲ್ಲಿ ವ್ಯಕ್ತಿಯ ಸ್ವಂತ ವ್ಯಕ್ತಿತ್ವದ ಪ್ರಜ್ಞೆ ಹುದುಗಿರುತ್ತದೆ. ತನ್ನತನ ಎಂಬುದು ವ್ಯಕ್ತಿ ವೈಶಿಷ್ಟ್ಯದ ಬದಲಿಗೆ ನೆಂಟತನದ ಮೇಲೆ ಕೇಂದ್ರಿತವಾಗಿರುತ್ತದೆ. ನಮ್ಮ ಭಾಷೆ ಇದನ್ನು ಸ್ಪಷ್ಟವಾಗಿ ವ್ಯಕ್ತಪಡಿಸುತ್ತದೆ. ಅಂದರೆ ಅದರಲ್ಲಿ ನಮ್ಮ ಎಲ್ಲ ಸಂಬಂಧಗಳ ಬಗೆಗಿನ ರೀತಿಗೆ ಪದಗಳಿವೆ.

ಈ ರೀತಿಯ ಸಂಸ್ಕೃತಿಗಳೊಳಗೆ ಪುರುಷತನ ಮತ್ತು ಸ್ತ್ರೀತನ ಎಂಬ ಬಗ್ಗೆ ನಿರ್ದಿಷ್ಟ ಅರ್ಥೈಸುವಿಕೆ ಇರತ್ತುದೆ. ಇವನ್ನು ವೈವಾಹಿಕ ಸಂಗಾತಿ, ಕುಟುಂಬ ಮತ್ತು ಸಮುದಾಯಕ್ಕೆ ಕರ್ತವ್ಯಗಳು ಮತ್ತು ಹೊಣೆಗಾರಿಕೆ ಮೂಲಕ

ತಿಳಿಸಲಾಗಿರುತ್ತದೆ. ಮದುವೆ ಆಗುವವರೆಗೆ ಗಂಡು, ಗಂಡಸಲ್ಲ ಹಾಗೆಯೇ ಹೆಣ್ಣು ಕೂಡ ಆದರೂ ಅವಳು ಮೊದಲ ಮಗು ಪಡೆದ ನಂತರ (ಅದರಲ್ಲೂ ಅದು ಗಂಡು ಮಗು) ಪೂರ್ಣ ಹೆಣ್ಣಾಗುತ್ತಾಳೆ. ಒಂದು ವಯೋಮಾನದ ನಂತರ ವ್ಯಕ್ತಿ ಒಂಟಿಯಾಗಿಯೇ ಉಳಿದುಬಿಟ್ಟರೆ ಅದನ್ನು ಕುಟುಂಬದ ಅಗೌರವ, ಅವಮಾನ ಎಂದು ಭಾವಿಸಲಾಗುತ್ತದೆ. ದಾರಿತಪ್ಪಿದವರು, ಅಥವಾ ಅಸ್ವಸ್ಥತೆ ಎಂದು ಕೂಡ ಪರಿಗಣಿಸಲಾಗುತ್ತದೆ. ಮದುವೆಯನ್ನು ಒಂಟಿತನಕ್ಕೆ ಇರುವ ಚಿಕಿತ್ಸೆ ಎಂದೇ ಪರಿಗಣಿಸಲಾಗಿದೆ.

ದಕ್ಷಿಣ ಏಷಿಯಾದ ಭಾಷೆಗಳಲ್ಲಿ ಹೋಮೊ ಸೆಕ್ಸುಯಲಿಟಿ ಹೆಟೆರೊ ಸೆಕ್ಸುಯಾಲಿಟಿ, ಬೈಸೆಕ್ಸುಯಾಲಿಟಿ ಎಂಬುವು ನಾಮ ಪದಗಳು ಅಥವಾ ವಿಶೇಷಣಗಳು ತಿಳಿಯಲು ನಿರ್ದಿಷ್ಟ ಅಭಿವ್ಯಕ್ತಿ ಇಲ್ಲ. ಇಲ್ಲಿರುವುದು ವಿಭಿನ್ನ ಲೈಂಗಿಕ ವರ್ತನೆಯ ಬಗೆಗಳು ಮತ್ತು ಈ ಪದಗಳು ನಿಂದನಾತ್ಮಕವಾದಂತಹವು. ಪುರುಷ ಪ್ರಧಾನವಾದವು ಹಾಗೂ ಕೇಲವೊಂದು ಶಿಶ್ನತೂರುವಿಕೆಯ ಕ್ರಿಯೆಗೆ ಸಂಬಂಧಿಸಿದಂತಹವಾಗಿವೆ. ಈ ಪದಗಳ ಹಿನ್ನೆಲೆಯಲ್ಲಿ ನೋಡಿದಾಗ, ಪುರುಷತ್ವಮತ್ತು ಸ್ತ್ರೀತ್ವಎಂದರೇನು ಎಂಬುದರ ಒಳಗೆ ಅಭಿಪ್ರಾಯಗಳು ಹುದುಗಿರುವುದು ಕಂಡು ಬರುತ್ತದೆ. ಗಂಡು ಮತ್ತು ಹೆಣ್ಣು ಎಂದರೆ ಹೇಗೆ ಇರಬೇಕು ಎಂದು ಸೂಚಿಸಲಾಗಿರುವ ಅದೇ ಸರಿಯಾದುದು ಎಂದು ಸ್ಥಾಪಿತವಾದ ರಚನೆಯೊಳಗೆ ಲೈಂಗಿಕ ವರ್ತನೆಗಳಿಗೆ ಅನುಮತಿ ಇದೆ. ಈ ರಚನೆಗಳೊಳಗೆ ಸಂಭೋಗ ಕ್ರಿಯೆಯಲ್ಲಿ ಯಾರು ಬೇಧಿಸುತ್ತಾರೋ ಅವರು ಮುಖ್ಯವಾಗುತ್ತಾರೆ.

ಅಂತೆಯೇ ಲೈಂಗಿಕವರ್ತನೆ ಯಾವತ್ತೂ ಇಲ್ಲಿ ವ್ಯಕ್ತಿ ಅನನ್ಯತೆಯ ಅಭಿವ್ಯಕ್ತಿ ಆಗಿಲ್ಲ. ಬದಲಿಗೆ ಅದು ಲೈಂಗಿಕ ವಾಂಛೆ ತೀರಿಸಿಕೊಳ್ಳಲು ಇರುವ ದಾರಿ, ಅದೊಂದು ಅವಕಾಶ ಮತ್ತು ಸುಲಭ ಸಾಧ್ಯ ಮಾರ್ಗ ಎಂದು ತಿಳಿಯಲಾಗಿದೆ. ಒಂದು ನುಡಿಗಟ್ಟಿದೆ ಲೈಂಗಿಕ ಒತ್ತಡ ಆಚೆ ಹೋಗಲು ಎಂಬುದು ಅಂದರೆ ಸಂಭೋಗ ಎಂಬುದು ಲೈಂಗಿಕ ಒತ್ತಡ ಕಳೆದುಕೊಳ್ಳುವ ಒಂದು ಅಭಿವ್ಯಕ್ತಿ. ದಕ್ಷಿಣ ಏಷಿಯಾದ ಲೈಂಗಿಕ ವರ್ತನೆಗಳನ್ನು ರಚಿಸುವಂತಹ ಸಾಂಸ್ಕೃತಿಕ ಚೌಕಟ್ಟುಗಳ ರೂಪದಲ್ಲಿ ಈ ಕೆಳಕಂಡ ಅಂಶಗಳನ್ನು ನೆನಪಿನಲ್ಲಿರಿಸಿಕೊಳ್ಳಬೇಕು.

- ಮದುವೆ ಎಂಬುದು ಒಂದು ಸಾಮಾಜಿಕ ಕಟ್ಟುಪಾಡು ಹಾಗು ಕರ್ತವ್ಯ. ಅದು ವ್ಯಕ್ತಿಯ ವೈಯುತ್ತಿಕ ಇಚ್ಛೆ ಅಥವಾ ಆಯ್ಕೆಯಲ್ಲ.
- ಮದುವೆಯನ್ನು ಕಡ್ಡಾಯ ಎಂಬಂತೆ ಕೂಡ ಕಾಣಲಾಗುತ್ತದೆ. ಒಂಟಿ ಆಗಿರುವುದು ಒಂದು ಅಪಚಾರ ಎಂಬುದಾಗಿಯು ಮದುವೆಯಾಗುವವರಗೆ ಆತ ವ್ಯಕ್ತಿ / ಪೂರ್ಣ ಮನುಷ್ಯನಲ್ಲ ಎಂಬುದಾಗಿ ಸಾಂಸ್ಕೃತಿಕ ನಂಬಿಕೆಗಳು ನಿರ್ದೇಶಿಸುತ್ತವೆ.
- ಮದುವೆಯ ಕೇಂದ್ರ ವಸ್ತು ಮಕ್ಕಳಾಗುವುದು, ಅದರಲ್ಲೂ ಗಂಡು ಮಕ್ಕಳಾಗುವುದು.
- ಲೈಂಗಿಕ ಉಲ್ಲಾಸ – ಇಚ್ಛೆ ಅಥವಾ ವಾಂಛೆ ಆಧರಿಸಿದ್ದು ಹೆಂಡತಿ ಅಪೇಕ್ಷಿಸಿದರೆ ಅದು ನಾಚಿಕೆಗೇಡಿನ ಸಂಗತಿ ಎಂಬಂತೆ ಕಾಣಲಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಹೆಂಡತಿಗೆ ಪ್ರತ್ಯೇಕ ಸ್ಥಾನ ಇದೆ. ಆಕೆ ತಾಯಿ – ಗೌರವಯುತ ಸ್ಥಾನ, ಅದಕ್ಕಾಗಿ ಆಕೆ ಕುಟುಂಬ ಸಂಪ್ರದಾಯ ಪಾಲಿಸುವವಳು, ಎತ್ತಿಹಿಡಿಯುವವಳು ಮತ್ತು ಮಕ್ಕಳನ್ನು ಸಾಕಿ ಸಲಹುವ ಜವಾಬ್ದಾರಿ ಹೊಂದಿರುತ್ತಾಳೆ. ಗಂಡ ಹೆಂಡತಿ ನಡುವಣ ಲೈಂಗಿಕತೆ ಸಂಪರ್ಕ ಒಂದು ಕರ್ತವ್ಯ ಎಂದೇ ಕಾಣಲಾಗುತ್ತದೆ. ಈ ರೀತಿಯ ಪರಿಕಲ್ಪನೆ ಮದುವೆಯಿಂದಾಚೆಗೆ ಲೈಂಗಿಕ ಸಂತೋಷ (ಸುಖ) ಪಡೆಯಬಹುದೆಂಬ ರೀತಿಗೆ ಕಾರಣವಾಗುತ್ತದೆ.

- ಲೈಂಗಿಕ ಸುಖ ಪಡೆಯಲು ಲಿಂಗ ಆಯ್ಕೆಯಲ್ಲಿ ವ್ಯಕ್ತಿತ್ವ ರ ಚನೆಯಿಲ್ಲದ ಕಾರಣ ಗಂಡಸರಿಗೆ ಮುಖ್ಯವಾಗುವುದು ತಮ್ಮ ಗಂಡಸುತನ ಮತ್ತು ಪುರುಷತ್ವ ಪರಿಕಲ್ಪನೆಗಳೇ.

- ಹಾಗಾಗಿ ವ್ಯಕ್ತಿತ್ವ ಪರಿಕಲ್ಪನೆ ಸಂಭೋಗ ರೀತಿಯ ಸುತ್ತಲೇ ಗಿರಕಿ ಹೊಡೆಯುತ್ತವೆ. ಸಂಭೋಗ ಮಾಡುವಂತ ಪುರುಷ ಮತ್ತು ಮಾಡಿಸಿಕೊಳ್ಳುವಾಕೆ/ತ ಪುರುಷನಲ್ಲ. ಅದರ ಜೋತೆಗೆ, ಅಲ್ಲಿ ಮುಖ್ಯವಾಗುವುದು ಸಂಗಾತಿಯ ಖುಷಿ, ಸುಖವಲ್ಲ ತನ್ನ ಸುಖ ಲೈಂಗಿಕ ವರ್ತನೆ ಕೇವಲ ಲೈಂಗಿಕ ಒತ್ತಡ / ವೀರ್ಯ ಕಳೆಯುವ ಕ್ರಿಯೆ.

- ಲಿಂಗ ಪ್ರತ್ಯೇಕತೆ, ಹೆಣ್ಣಿನ ಕನ್ಯತ್ವ, ಗೌರವ ನಷ್ಟ ಮುಂತಾದುವು ಹೆಣ್ಣನ್ನು ಹೊಂದುವುದಕ್ಕಿಂತ ಗಂಡನ್ನು ಲೈಂಗಿಕ ಸುಖಕ್ಕೆ ಹೊಂದಲು ಸುಲಭ ಕಾರಣಗಳಾಗಿವೆ.

- ಅಂತಹ ಸುಲಭ ದಾರಿಗಳು ಮತ್ತಷ್ಟು ಸುಲಭವಾಗಿರುವುದಕ್ಕೆ ವಿಸ್ತಾರಿತ ಕುಟುಂಬ ಪದ್ದತಿಗಳು, ಕುಟುಂಬ ಸದಸ್ಯರ ಸಾಮಾಜಿಕ ಬೆರೆಯುವಿಕೆಯೊಂದಿಗೆ ದಕ್ಷಿಣ ಏಷಿಯಾದ ಏಕರೂಪ ಸಾಮಾಜೀಕತ್ವಕಾರಣವಾಗುತ್ತದೆ.

- ನಾಚಿಕೆ, ಅವಮಾನ ಮತ್ತು ಅಗೌರವವಗಳು ಸಾರ್ವಜನಿಕ ದೃಷ್ಠಿಯಿಂದ ರೂಪಿತವಾಗಿದ್ದು ವ್ಯಕ್ತಿಯ ವೈಯಕ್ತಿಕ ವರ್ತನೆ ಸಾರ್ವಜನಿಕ ಕರ್ತವ್ಯ ಪೂರೈಸುವ ಅಗತ್ಯವೂ ಆಗಿದೆ.

- ಲೈಂಗಿಕತೆ ಮತ್ತು ಲೈಂಗಿಕ ವರ್ತನೆಗಳ ಪರಿಕಲ್ಪನೆಗಳು ಲೈಂಗಿಕ ಒತ್ತಡ / ವೀರ್ಯ ಕಳೆದು ಕೊಳ್ಳುವ ಪರಿಕಲ್ಪನೆಯೊಳಗೆ ಹುದುಗಿರುವುದರಿಂದ ಬೇರೆ ಬೇರೆ ಲೈಂಗಿಕ ಸಂಗಾತಿ ಹೊಂದುವುದಕ್ಕೆ ಕಾರಣವಾಗುತ್ತದೆ ಹೊರತು ಒಂದೇ ವ್ಯಕ್ತಿಯೊಂದಿಗೆ ಲೈಂಗಿಕ ಸಂಪರ್ಕ ನಿರಂತರವಾಗಿರಲು ಅಲ್ಲ.

- ಹಾಗು ಲೈಂಗಿಕ ಸಂಗಾತಿಯ ಲಿಂಗ ಅಪ್ರಸ್ತುತವಾಗುತ್ತುದೆ. ಇದನ್ನು ಈ ಹೇಳಿಕೆಯಿಂದ ವ್ಯಕ್ತಗೊಳಿಸಬಹುದು : ವ್ಯಕ್ತಿ ತನ್ನ ಹೆಂಡತಿಯೊಂದಿಗೆ ಸಂಬಂಧ ಹೊಂದಿದ್ದಾನೆ ಆದರೆ ಇತರರೊಂದಿಗೆ ಲೈಂಗಿಕ ಸುಖ ಹೊಂದುತ್ತಾನೆ.

- ಮಹಿಳೆಯರ ಮೇಲೆ ಸದಾ ಕಾವಲಿರುತ್ತದೆ. ಕುಟುಂಬ ಮತ್ತು ಸಮುದಾಯದ ಕಾವಲು ಗಣ್ಣಿನಡಿಯಲ್ಲೂ ಇರುತ್ತಾಳೆ. ಹಾಗಾಗಿ ಆಕೆ ಸಾಮಾಜಿಕವಾಗಿ ಅಕ್ರಮ ಲೈಂಗಿಕ ಸಂಬಂಧ / ಆಕಸ್ಮಿಕಗಳಲ್ಲಿ ಭಾಗಿಯಾಗುವುದು ಕಷ್ಟ, ಹಾಗೂ ಅಂತಹ ಅಕ್ರಮ ಸಂಬಂಧ ಹೊಂದಿದರೆ ಆಕೆಗೆ ವಿಧಿಸುವ ದಂಡನೆ ತೀವ್ರವಾದುದಾಗಿರುತ್ತದೆ.

- ಈ ಎಲ್ಲದರ ಹಿನ್ನೆಲೆಯಲ್ಲಿ, ಮಹಿಳೆಯ ಲೈಂಗಿಕ ಮತ್ತು ಸಂತಾನತ್ಪೋತ್ತಿ ಆರೋಗ್ಯ ಪುರುಷ ಲೈಂಗಿಕ ವರ್ತನೆಯನ್ನು ಅವನ ಅಭ್ಯಾಸಗಳನ್ನು ಅವಲಂಬಿಸಿದೆ. ಅವರ ರಚನೆಗಳು ಕೂಡ ಕಾಲ, ಸಮಯ, ಲಭ್ಯತೆ, ಲಿಂಗ ಪಾತ್ರಗಳು, ವೈಯಕ್ತಿಕ ಇಚ್ಛೆಗಳು ಮತ್ತು ಅವಕಾಶಗಳಿಂದ ರೂಪಿತವಾಗಿರುತ್ತದೆ.

## ಹೆಸರಿನಲ್ಲೇನಿದೆ? ಸೂಕ್ತ ಪದ ಬಳಕೆ.

ಬಹಳವಿದೆ. ಏಡ್ಸ್ ಬಲಿಪಶು ಎಂದು ಅಥವಾ ಏಡ್ಸ್ ವಾಹಕ ಎಂದು ಅಸಭ್ಯ ಅಶ್ಲೀಲ ಹೆಸರು ಬಳಕೆಯಾದಾಗ ಅದು ಕೊಡುವ ಅರ್ಥ ಬೇರೆ. ಆ ಬೇರೆಯಾದ ಅರ್ಥ ಎಚ್ ಐ ವಿ / ಏಡ್ಸ್ ಎನ್ನುವ ಅಂಟುರೋಗ ಹಾಗು ಲೈಂಗಿಕ ಧ್ವನಿ ಕೊಡುತ್ತದೆ. ಅದು ವೈಜ್ಞಾನಿಕ, ಅಸ್ಪಷ್ಟ, ತಪ್ಪುಮತ್ತು ಹೆಚ್ಚಾಗಿ ಒರಟು! ಕೆಳಗೆ ಅಂತಹ ಅಸಮರ್ಪಕ ಪದ ಬಳಕೆಯ ಕೆಲ ಉದಾಹರಣೆಗಳನ್ನು ಅದಕ್ಕೆ ಪರ್ಯಾಯಗಳನ್ನು ನೀಡಲಾಗಿದೆ.

### ಮುಗ್ಧ ಮತ್ತು ತಪ್ಪಿತಸ್ಥ ಬಲಿಪಶುಗಳು

ಎಚ್ ಐ ವಿ ಸೋಂಕು ಮುಖ್ಯವಾಗಿ ಮೂರು ಮಾರ್ಗಗಳ ಮೂಲಕ ಹರಡುತ್ತದೆ. ಅಸುರಕ್ಷಿತ ಲೈಂಗಿಕ ಚಟುವಟಿಕೆ, ಸೋಂಕು ಇರುವ ರಕ್ತದ ಮೂಲಕ, ಹಾಗು ಸೋಂಕು ಇರುವ ತಾಯಿಯಿಂದ ಆಕೆಯ ನವಜಾತ ಮಗುವಿಗೆ ಇದು ಎಂತಹ ಅಪಾರ್ಥಕ್ಕೆಡೆ ಮಾಡಿಕೊಟ್ಟಿದೆ ಎಂದರೆ, ಕೆಲವು ಸೋಂಕು ತಗಲಿದವರನ್ನು ಆಪಾದಿತರೆಂಬಂತೆ ಕಾಣಲಾಗುತ್ತದೆ. ಕೆಲ ರೀತಿ ಎಂದರೆ, ಅಸುರಕ್ಷಿತ ಲೈಂಗಿಕ ಸಂಪರ್ಕ ಹಾಗು ಮಾದಕ ದ್ರವ್ಯ ವ್ಯಸನಿಗಳನ್ನು ದೂಷಿಸಲಾಗುತ್ತದೆ. ಹಾಗು ಇತರರನ್ನು ಮುಗ್ಧ ಬಲಿಪುಶುಗಳು ಎಂದು ಕಾಣಲಾಗುತ್ತದೆ. ಅವರು ಎಷ್ಟು ಮುಗ್ಧರೆಂದರೆ ಅವರಿಗೆ ತಗಲಿರುವ ಸೋಂಕಿಗೆ ಅವರನ್ನು ದೂಷಿಸಲಾಗದು ಎಂದೇ ಹೇಳಲಾಗುತ್ತದೆ. ಅವರು ಬಲಿಪಶು ಎಂದು ಕರೆಯಲು ಕಾರಣ ಈ ಕೆಟ್ಟ ಸೋಂಕು ಅವರಿಗೆ ತಗಲಿದೆ, ತಗಲುವಂತೆ ಮಾಡಲಾಗಿದೆ ಎಂಬರ್ಥ. ಮುಗ್ಧ ಮತ್ತು ತಪ್ಪಿತಸ್ಥ ಬಲಿಪಶು ಎಂಬ ಪದಗಳ ನಡುವಿನ ಧ್ವನಿ ಪಾರಾಂಪರಿತ ಭಾವ ಮತ್ತು ಪೂರ್ವಗ್ರಹ ನೆಲೆಯೂರುವುದಕ್ಕೆ ಸಹಾಯ ಮಾಡುತ್ತವೆ. ಹಾಗು ಅವು ವಿವಿಧ ತಡೆ ಕಾರ್ಯದ ಮೇಲೆ ಸೋಂಕಿತರಿಗೆ ಸಿಗುವ ಸೇವೆಗಳ ಮೇಲೆ ಹಾನಿಕಾರಕ ಪರಿಣಾಮ ಬೀರುತ್ತವೆ. ಬಲಿಪಶು ಎಂಬ ಪದ ಸಾಮಾನ್ಯವಾಗಿ ಬಳಕೆಯಾಗುವುದು ಯಾರು ಹಲ್ಲೆಗೆ ಒಳಗಾಗುತ್ತಾರೊ, ಅರ್ಥ ಯಾವುದಾದರೂ ಘಟನೆಯಿಂದ ತೀರ ಬಳಲುತ್ತಾರೊ ಅವರನ್ನು ಬಣ್ಣಿಸಲು ಎಚ್ ಐ ವಿ ಯನ್ನು ಈ ಹಿಂಸಾಚಾರದ .............. ಎಂಬಂತೆ ಕಾಣಲಾಗುತ್ತದೆ ಬಲಿಪಶು ಎಂಬ ಪದಬಳಕೆ ಕೇವಲ ಯಾವುದಕ್ಕೆ ಸಹಕಾರಿಯಾಗುತ್ತದೆ ಎಂದರೆ ಸೋಂಕು ತಗಲಿದವರಲ್ಲಿ ಕೆಲವರು ಮುಗ್ಧರು ಕೆಲವರು ತಪ್ಪಿತಸ್ಥರು ಎಂಬ ಸೂಚನೆ ಕೊಡಲು ಮಾತ್ರ.

**ನಿಯಮ 1 : ಮುಗ್ಧ ಮತ್ತು ತಪ್ಪಿತಸ್ಥ ಬಲಿಪಶುಗಳು ಇಲ್ಲ, ಈ ಪದ ಬಳಕೆ ಬೇಡ!**

### ಏಡ್ಸ್ ನಿಂದ ಬಳಲುತ್ತಿರುವವರು

ಎಚ್ ಐ ವಿ / ಏಡ್ಸ್ ಹಲವು ರೋಗಗಳ ಮಿಶ್ರ ಸ್ಥಿತಿಯಾದ್ದರಿಂದ ಹಾಗು ಅದಕ್ಕೆ ತಗಲಿರುವ ಕಳಂಕದಿಂದ ಏಡ್ಸ್ ಸೋಂಕಿತರು ಬಳಲುವುದು ಸಾಮಾನ್ಯ. ಆದರೆ ಬಳಲಾಟ ಎಂಬ ಪದ ಬಳಕೆ ಕೊಡುವ ಸಾರ್ವತ್ರಿಕ ಧನಿ ಬೇರೆ. ಆ ಧನಿ ಕೊಡುವ ಚಿತ್ರದ ಸತ್ಯ ಅದಲ್ಲ. ಎಚ್ ಐ ವಿ ಮತ್ತು ಏಡ್ಸ್ ಸೋಂಕಿತುರ ಅದರಲ್ಲೂ ಏಡ್ಸ್ ವೈರಾಣು ಪ್ರತಿರೊಧಕ ಚಿಕಿತ್ಸೆ ದೊರೆಯುವಿಕೆ ನಂತರ ಸಾಮಾನ್ಯ ಜೀವನ ನಡೆಸಲು ಸಾಧ್ಯವಾಗಿದೆ. ಅವರು ಒಳ್ಳೆ ಆರೋಗ್ಯದ ದೀರ್ಘ ಜೀವನ ಸಡೆಸುತ್ತಿದ್ದಾರೆ. ಬಳಲಾಟ ಎಂಬ ಪದ ಬಳಕೆ ಎಚ್ ಐ ವಿ ಮತ್ತು ಏಡ್ಸ್ ಸೋಂಕಿತದ ಬಗ್ಗೆ ಕಳಂಕ ಉಂಟುಮಾಡುವಂತಹುದಾಗಿದೆ. ಅದು ಸಕಾರಾತ್ಮಕ ಮತ್ತು ಎಚ್ ಐ ವಿ ಸೋಂಕಿತರ ಬಗ್ಗೆ ಯಾವುದೇ ಸಕಾರಾತ್ಮಕ ಭಾವನೆಗೆ ಇಂದು ಕೊಡುವುದಿಲ್ಲ.

**ನಿಯಮ 2 : ಏಡ್ಸ್ ನಿಂದ ಬಳಲುತ್ತಿರುವವರು ಬದಲು ಏಡ್ಸ್‌ನೊಂದಿಗೆ ಬದುಕುತ್ತಿರುವವರು ಬಳಸಿ.**

### ಏಡ್ಸ್ ಪರೀಕ್ಷೆ

ಏಡ್ಸ್ ಎಂಬುದು ವೈಜ್ಞಾನಿಕ ವರ್ಗೀಕರಣ ಮತ್ತು ಒಂದು ಪರೀಕ್ಷೆಯ ಫಲಿತಾಂಶವಲ್ಲ. ಈ ಏಡ್ಸ್ ಪರೀಕ್ಷೆ ಎಂಬ ಪದ ಬಳಕೆಯಾದಾಗ ಅದು ಕೊಡುವ ಅರ್ಥ ದೇಹದಲ್ಲಿ ಎಚ್ ಐ ವಿ ಯ ಪ್ರತಿಜನ್ಯಗಳ ಪತ್ತೆಗೆ ಮಾಡಲಾಗುವ ಪರೀಕ್ಷೆ ಏಡ್ಸ್ ಪರೀಕ್ಷೆ ಎಂಬ ಪದ ಬಳಕೆಯು ತಪ್ಪು ದಾರಿಗೆಳೆಯುವಂತಹುದಾಗಿದೆ. ನಿಜವಾದ ಪರೀಕ್ಷೆ ನಡೆಯುವುದು ವೈರಾಣುವಿಗೆ ದೇಹ ತೋರುವ ಪ್ರತಿಕ್ರಿಯೆ ಅಥವಾ ವೈರಾಣುಗಳ ಪ್ರತಿಕ್ರಿಯೆ ತಿಳಿಯಲು ಮಾತ್ರ. ಆದರೆ ಏಡ್ಸ್ ಪರೀಕ್ಷೆ ಎಂದಾಗ ಅದು ಏನನ್ನು ಧ್ವನಿಸುತ್ತದೆ ಎಂದರೆ ಎಚ್ ಐ ವಿ ಪರೀಕ್ಷೆ ಫಲಿತಾಂಶ ಪಾಸಟಿವ್ ಬಂದಿದ್ದರೆ ಆ ವ್ಯಕ್ತಿಗೆ ಏಡ್ಸ್ ಬರುತ್ತದೆ ಎಂದರ್ಥ. ಅದು ಯಾವಾಗಲೂ ನಿಜವಲ್ಲ.

**ನಿಯಮ 3 : ಏಡ್ಸ್ ಪರೀಕ್ಷೆ ಪದ ಬಳಕೆ ಬದಲು ಎಚ್ ಐ ವಿ ಪ್ರತಿಜನ್ಯಗಳ ಪರೀಕ್ಷೆ ಬಳಕೆ ಸೂಕ್ತ.**

### ಏಡ್ಸ್ ವಾಹಕ

ಈ ಪದ ಬಳಕೆ ಏಡ್ಸ್ ವ್ಯಕ್ತಿಯಿಂದ ವ್ಯಕ್ತಿಗೆ ಹರಡುತ್ತದೆ ಎಂಬ ಅರ್ಥ ಕೊಡುತ್ತದೆ. ಇದು ನಿಜವಲ್ಲ ವೈರಾಣು ನಿಜವಾಗಿ ಏಡ್ಸ್ ವೈರಾಣು ನೆಗಡಿ ಉಂಟುಮಾಡುವ ವೈರಾಣುವಿನಂತೆ ಸಾಂಕ್ರಾಮಿಕವಲ್ಲ. ಅದು ಹರಡುವುದು ಕೇವಲ ಸೋಂಕಿತ ದೇಹ ದ್ರವ್ಯಗಳ ಮುಖಾಂತರ ಮಾತ್ರ (ಲೈಂಗಿಕ ಅಥವಾ ಇತರ ಸಂಪರ್ಕದಿಂದ) ಅದು ಸೋಂಕಿತರ ರಕ್ತ ಪಡೆದರೆ ಹಾಗು ಸೋಂಕಿತ ತಾಯಿಯಿಂದ ಮಗುವಿಗೆ ಹರಡುವುದನ್ನು ಒಳಗೊಳುತ್ತದೆ. ಒಮ್ಮೆ ಎಚ್ ಐ ವಿ ಸೋಂಕು ತಗಲಿದರೆ ಬಹುತೇಕ ಮಂದಿ ಜೀವನ ಪರ್ಯಂತ ಸೋಂಕಿತರಾಗೇ ಉಳಿಯುತ್ತಾರೆ ಎಂಬುದು ಸತ್ಯ. ವೈರಾಣು ಪ್ರಮಾಣದ ಮಟ್ಟ ಹಾಗು ಅದನ್ನು ಇನ್ನೊಬ್ಬರಿಗೆ ರವಾನಿಸುವುದು. ವ್ಯತ್ಯಯವಾಗುತ್ತದೆ. ಹಾಗಾಗಿ ಏಡ್ಸ್ ವಾಹಕರು ಎಂಬುವವರಿಲ್ಲ. ಅವರು ಕೇವಲ ವೈರಾಣುವಿನೊಂದಿಗೆ ಬದುಕುತ್ತಿರುವವರು ಅಷ್ಟೆ.

**ನಿಯಮ 4 : ಏಡ್ಸ್ ವಾಹಕರು ಬದಲಿಗೆ ಏಚ್ ಐ ವಿ ಯೊಂದಿಗೆ ಬದುಕುತ್ತಿರುವವರು ಎಂಬ ಬಳಸಿ.**

### ವೈಜ್ಞಾನಿಕ ಪದಗಳು

ಎಚ್ ಐ ವಿ ಮತ್ತು ಏಡ್ಸ್ ಎರಡೂ ವೈರಾಣು ಮತ್ತು ವೈದ್ಯಕೀಯ ಸ್ಥಿತಿಯ ಸರಿಯಾದ ವೈಜ್ಞಾನಿಕ ವಿವರಣೆಗಳು. ಕುಸಿದ ಪ್ರತಿರೋಧ ವ್ಯವಸ್ಥೆಯಿಂದಾಗಿ ಬರುವಂತಹ ರೋಗಗಳು, ಅದನ್ನು ತಡೆಯಲು ಬಳಸುವಂತಹ ಔಷಧಗಳು, ವೈರಾಣು ಮತ್ತು ಅವನ್ನು ಆಕ್ರಮಿಸಲು ಬಳಸುವ ಔಷಧಿಗಳು ವೈರಾಣು ಮತ್ತು ಅದರ ಕಾರ್ಯಗತಿ, ವಿಧಾನಗಳಿಗೆ ಸಂಕೀರ್ಣವಾದ ಹೆಸರುಗಳಿರಬಹುದು. ಲೈಂಗಿಕವಾಗಿ ಹರಡುವ ರೋಗಗಳು ಮತ್ತು ಲೈಂಗಿಕ ಆರೋಗ್ಯ ಸಮಸ್ಯೆಗಳು ಕೂಡ ಹಲವಾರು ಸೂಕ್ಷ್ಮ ರೋಗಾಣುಗಳ ವೈಜ್ಞಾನಿಕ ವಿವರಣೆಗಳನ್ನೊಳಗೊಳುತ್ತದೆ. ನಾವು ನಮ್ಮ ವೀಕ್ಷಕರನ್ನು ತಲುಪುವಾಗ ಎಚ್ ಐ ವಿ / ಏಡ್ಸ್ ಬಗ್ಗೆ ಮತ್ತು ಲೈಂಗಿಕ ರೋಗಗಳ ಬಗ್ಗೆ ಹೇಳುವಾಗ ಅವರನ್ನು ನಾವು ಸಿರಿಯಾಗಿ ಅರ್ಥಮಾಡಿಕೊಳ್ಳಬೇಕಾದುದು ತುಂಬಾ ಮುಖ್ಯ. ಹಲವಾರು ಸಾಮಾನ್ಯರಿಗೆ ವಿಜ್ಞಾನದ ಬಗ್ಗೆ ಕಡಿಮೆ ತಿಳಿವಳಿಕೆಯಿರುತ್ತದೆ. ಹಾಗಾಗಿ ಅವರೊಂದಿಗೆ ವ್ಯವಹರಿಸುವಾಗ ಭಾಷೆ ಬಗ್ಗೆ ಎಚ್ಚರವಿರಬೇಕು. ಅವರಿಗೆ ಸುಲಭವಾಗಿ ಅರ್ಥವಾಗುವ ಭಾಷೆಯ ಮೂಲಕ ಹೇಳಬೇಕು. ಉದಾಹರಣೆಗೆ, ಸ್ಥಳೀಯರಾಗಿ ಆ ರೋಗಗಳಿಗೆ ಏನು ಪದ ಬಳಸುತ್ತಿರುತ್ತಾರೊ ಅದನ್ನೆ ಬಳಸುವುದು ಸೂಕ್ತ. ಇತರ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಮಸ್ಯೆಗಳನ್ನು ವಿಜ್ಞಾನ ಮುಚ್ಚಿಹಾಕಲು ಪ್ರಯತ್ನಬೇಡ.

**ಸಕಾರಾತ್ಮಕವಾಗಿರಿ  ನಕಾರಾತ್ಮಕತೆ ಬೇಡ :**

ಎಚ್ ಐ ವಿ ಯೊಂದಿಗೆ ಬದುಕುತ್ತಿರುವವರು ಇತರರಂತೆಯೇ. ಅವರಿಗೆ ವೈರಾಣು ಸೋಂಕು ತಗಲಿರುವುದು ಬಿಟ್ಟರೆ ವ್ಯತ್ಯಾಸ ವೇನಿಲ್ಲ. ಏಡ್ಸ್ ತಗಲಿರುವುದು ಪತ್ತೆಯಾದ ವ್ಯಕ್ತಿಗಳು ಕೂಡ ಇತರರೆಂತೆಯೇ, ಅಲ್ಲಿರುವ ವ್ಯತ್ಯಾಸ ಎಂದರೆ ಅವರ ದೇಹ ಸಂರಕ್ಷಕ ವ್ಯವಸ್ಥೆ ವೈರಾಣು ಸೋಂಕಿಗೆ ಸಿಕ್ಕಿ ಕುಸಿದಿದೆ ಎಂಬುದಷ್ಟೆ, ನಾವು ಬಳಸುವ ಭಾಷೆ ತಾರತಮ್ಯ, ಭೇದಕ್ಕೆ ದಾರಿ ಮಾಡಿಕೊಡಬಾರದು ಎಂಬುದು ಮುಖ್ಯ. ಅಥವಾ ಎಚ್ ಐ ವಿ / ಏಡ್ಸ್ ಒಂದು ಮರಣ ಶಾಸನ ಮತ್ತು ಎಚ್ ಐ ವಿ / ಏಡ್ಸ್ ಸೋಂಕಿತರ ಇತರರಂತೆ ಚಟುವಟಿಕೆಯ ಜೀವನ ನಡೆಸಲಾರರು ಇತ್ಯಾದಿ ಸೂಚನೆ ಸಿಗುವ ಪದ ಬಳಕೆ ಸಲ್ಲದು. ಭಾಷೆ ಅಧಿಕಾರ ಚಲಾಯಿಸಬಲ್ಲದು ಮತ್ತು ಅದು ತುಂಬಾ ಮುಖ್ಯ ಯಾವುದೇ ಆಧಿಕಾರವನ್ನು ಹೇಗೆ ಜವಾಬ್ದಾರಿ ಮತ್ತು ವಿವೇಕದಿಂದ ಬಳಸುತ್ತೇವೊ ಹಾಗೆಯೇ ಇಲ್ಲೂ ಕೂಡ.

**ನಾಜ್ ಅಂತಾರಾಷ್ಟ್ರೀಯ ಪ್ರತಿಷ್ಠಾನದ ನೈತಿಕ ಹೇಳಿಕೆ.**

ನಾಜ್ ಅಂತಾರಾಷ್ಟ್ರೀಯ ಪ್ರತಿಷ್ಠಾನವು ಪುರುಷ-ಪುರುಷ ಲೈಂಗಿಕತೆ ಲೈಂಗಿಕ ರೋಗಗಳ ಕುರಿತು ಕಾರ್ಯ ನಿರ್ವ ಹಿಸುತ್ತದೆ. ತನ್ನ ಉದ್ದೇಶ ಮತ್ತು ಕಾರ್ಯಗತಿ ಅದರ ಪರಿಣಾಮಗಳನ್ನು ಪ್ರತಿಷ್ಠಾನ ಪೂರ್ಣವಾಗಿ ಪರಿಗಣಿಸುತ್ತದೆ. ಅಂದರೆ ತನ್ನ ಕೇಂದ್ರಿತ ಸಮೂಹ, ಪುರುಷ-ಪುರುಷ ಲೈಂಗಿಕತೆ ಇರುವವರು ಲೈಂಗಿಕ ವೃತ್ತಿ ನಡೆಸುವವರು, ಅವರ ಗಿರಾಕಿಗಳು ಎಲ್ಲರ ಬಗ್ಗೆ ಕಾಳಜಿ ಹೊಂದಿದೆ.

ಈ ತನ್ನ ಉದ್ದೇಶ ಸಾಧನೆಯಲ್ಲಿ ಪ್ರತಿಷ್ಠಾನವು ಈ ಕೆಳಗೆ ನೀಡಲಾದ ಸತ್ವಗಳ ಅನುಸಾರ ನಡೆಯುತ್ತದೆ :

1. ಪುರುಷರೊಂದಿಗೆ ಲೈಂಗಿಕ ಸಂಪರ್ಕ ಹೊಂದಿರುವ ಪುರುಷರ ಸಂತಾನೋತ್ಪತ್ತಿ ಮತ್ತು ಲೈಂಗಿಕ ಆರೋಗ್ಯ ಸಂವರ್ಧನೆಗೆ ಲೈಂಗಿಕ ಜವಾಬ್ದಾರಿ ಹಾಗು ಸುರಕ್ಷಿತ ಲೈಂಗಿಕ ಅಭ್ಯಾಸಗಳನ್ನು ಉತ್ತೇಜಿಸುವುದು.

2. ಪುರುಷರೊಂದಿಗೆ ಲೈಂಗಿಕ ಸಂಪರ್ಕ ಹೊಂದಿರುವವರಿಗೆ ಲೈಂಗಿಕ ರೋಗ ಚಿಕಿತ್ಸೆ ಅಗತ್ಯವಾದಾಗ ಅದನ್ನು ಪಡೆಯಲು ಉತ್ತೇಜಿಸುವುದು.

3. ಪುರುಷರೊಂದಿಗಿನ ಅವರ ಸಂಬಂಧ ಅವರ ಲೈಂಗಿಕ ಸಂಗಾತಿಗಳು ಹಾಗು / ಅಥವಾ ಅರ್ಥಿಗಳೊಂದಿಗಿನ ಸಂಬಂಧಕ್ಕೆ ಗೌರವ ನೀಡುವುದು.

4. ಮಕ್ಕಳು ಮತ್ತು ಸಮ್ಮತಿ ತೋರದ ವಯಸ್ಕರನ್ನು ನಿಂದನೆಯ ಲೈಂಗಿಕ ಸಂಬಂಧಗಳಿಂದ ರಕ್ಷಣೆಯನ್ನು ಉತ್ತೇಜಿಸುವುದು. ಅವರ ಪುರುಷ ಸಂಗಾತಿಯ ಲೈಂಗಿಕ ಜವಾಬ್ದಾರಿ ಉತ್ತೇಜಿಸುವ ಮೂಲಕ.

5. ಪುರುಷ-ಪುರುಷ ಲೈಂಗಿಕ ಸಂಪರ್ಕವಿರುವ ಯಾವುದೇ ವ್ಯಕ್ತಿಯ ಮಹಿಳಾ ಸಂಗಾತಿಯ ಲೈಂಗಿಕ ಆರೋಗ್ಯ, ಸಂತಾನೋತ್ಪತ್ತಿ ಉತ್ತೇಜಿಸುವುದು.

6. ಲೈಂಗಿಕ ಸಂಗಾತಿಗಳ ನಡುವಿನ ಲೈಂಗಿಕ ಆರೋಗ್ಯ ಮಾಹಿತಿ ಬಗೆಗಿನ ಮಾತುಕತೆಗೆ ಉತ್ತೇಜನ ಯಾರೇ ಒಬ್ಬ ಸಂಗಾತಿಗೆ ಎಸ್ ಟಿ ಡಿ / ಎಚ್ ಐ ವಿ ಸೋಂಕು ಇದ್ದರೆ ಅವರು ಯಾವುದೇ ಲಿಂಗವಾಗಿರಲಿ ಅದರ ಗುರುತಿಸುವಿಕೆಗೆ ಸಹಾಯಮಾಡುವುದು.

7. ಮಹಿಳಾ ಸಂತಾಗೋತ್ಪತ್ತಿ ಮತ್ತು ಲೈಂಗಿಕ ಆರೋಗ್ಯ ಸೇವೆಗಳ ಬಗ್ಗೆ ಕಾಳಜಿ ಪುರುಷುರೊಂದಿಗೆ ಲೈಂಗಿಕ ಸಂಪರ್ಕವಿರುವ ಪುರುಷರ ಸೋಂಕು ಇರುವ ಹೆಣ್ಣು ಸಂಗಾತಿಗೆ ಚಿಕಿತ್ಸೆ ಇತ್ಯಾದಿಗೆ ಸೂಕ್ತ ಸೌಲಭ್ಯ.

## ಎಂ ಎಸ್ ಎಂ ಲೈಂಗಿಕ ಆರೋಗ್ಯ ಕಾರ್ಯಕ್ರಮಗಳ ಬಗೆಗಿನ ಪ್ರತಿಷ್ಠಾನದ ಪ್ರಕ್ರಿಯೆ ಮಾದರಿ :

**ಪರಿಚಯಿ :**

ನಾಜ್ ಅಂತಾರಾಷ್ಟ್ರೀಯ ಪ್ರತಿಷ್ಠಾನವು ಎಂ ಎಸ್ ಎಂ ಗಳಿಗೆ, ಅವರ ಸಂಗಾತಿ ಅವರ ಕುಟುಂಬ ಮೊದಲಾದವರಿಗೆ, ಎಚ್ ಐ ವಿ ಮತ್ತು ಇತರ ಲೈಂಗಿಕ ರೋಗ ತಡೆ ಕುರಿತ ಕಾರ್ಯಕ್ರಮಗಳನ್ನು ಅಭಿವೃದ್ಧಿ ಪಡಿಸಿದೆ. ಈ ಕಾರ್ಯಕ್ರಮಗಳು ಎಂ ಎಸ್ ಎಂ ಸಮೂಹದವರ ಆರೋಗ್ಯ, ಕ್ಷೇಮ ಅವರ ಮಾನವ ಹಕ್ಕುಗಳು ಎಲ್ಲವನ್ನು ಒಳಗೊಂಡಿರುತ್ತದೆ. ಈ ಮಾದರಿ ಹಲವಾರು ಪ್ರಮುಖ ಅಂಶಗಳನ್ನು ಹೊಂದಿದೆ ಮತ್ತು ಅದರ ಸಾರಾಂಶವನ್ನು ಕಡೆಯಲ್ಲಿ ನೀಡಲಾಗಿದೆ.

**ಮಾದರಿಯ ಮುಖ್ಯಾಂಶಗಳು :**

1. ಪುರುಷ - ಪುರುಷ ಲೈಂಗಿಕತೆ ಮತ್ತು ಅದರ ಅಗತ್ಯಗಳ ಬಗ್ಗೆ ಸಮರ್ಪಕ ಅರಿವು ಇದನ್ನು

   - ಕಳೆದ ಕೆಲ ವರ್ಷಗಳಿಂದ ಪ್ರತಿಷ್ಠಾನ ಕೈಗೊಂಡು ದಾಖಲಿಸಿದ ಅಧ್ಯಯನಗಳು ಮತ್ತು ಎಂ ಎಸ್ ಎಂ ಗಳ ಅಗತ್ಯ ಮಾಪನದಿಂದ ಪಡೆದು ಕೊಳ್ಳಲಾಗಿದೆ.

   - ಚಾಲ್ತಿಯಲ್ಲಿರುವ ಸಮುದಾಯ ಆಧಾರಿತ ಕ್ರಮಗಳ ಬಗ್ಗೆ ನಿಗಾ ಮತ್ತು ಅದರ ಮೌಲ್ಯ ಮಾಪನದಿಂದ ತಿಳಿಯಲಾಗಿದೆ.

   - ಕೆಲ ನಿರ್ದಿಷ್ಟ ಆತಂಕಗಳನ್ನು ಪರಿಹರಿಸಲು ಹೊಸ ಸಂಶೋಧನಾ ಸಹಭಾಗಿತ್ವದ ನಿರಂತರ ಅಭಿವೃದ್ಧಿ.

2. ಸ್ಪಷ್ಟವಾಗಿ ವ್ಯಾಖ್ಯಾನಿಸಲಾದ ಅಭಿವೃದ್ಧಿ ಕಾರ್ಯತಂತ್ರ. ಪುರುಷ ಪುರುಷ ಲೈಂಗಿಕತೆಯುಳ್ಳವರ ವರ್ತನೆ ಕುರಿತು ಕೆಲಸ ಕೈಗೆತ್ತಿ ಕೊಳ್ಳುವಂತಹ ಸಮುದಾಯ ಆಧಾರಿತ ಸಂಸ್ಥೆಗಳ ಅಭಿವೃದ್ಧಿ ಈ ಸಂಸ್ತೆಗಳು ನಂತರ ತಮ್ಮ ರಾಜ್ಯದೊಳಗೆ ಜಿಲ್ಲಾ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತವೆ. ಹಾಗು ಅವುಗಳಿಗೆ ಪ್ರತಿಷ್ಠಾನದ ನಿರಂತರ ಬೆಂಬಲ.

3. ಬಲವಾದ ಪ್ರತಿಷ್ಠಾನದ, ನೀತಿ, ಹಾಗು ನಿರಂತರ ಬೆಂಬಲ ಕಾರ್ಯತಂತ್ರ ಮಾದರಿಯು ಸಮರ್ಥ ಪ್ರತಿಪಾದನೆ ಮತ್ತು ನೀತಿ ಅಭಿವೃದ್ಧಿಯ ಸಶಕ್ತ ಅಂಶವನೊಳಗೊಂಡಿದೆ. ಇದು ಸಕಾರಾತ್ಮಕ ರಾಜಕೀಯ, ಸಾಮಾಜಿಕ, ಕಾನೂನು ಮತ್ತು ನೀತಿಯ ವಾತಾವರಣ ಉಂಟಾಗಲು ಸಹಾಯಮಾಡುತ್ತದೆ. ಎಂ ಎಸ್ ಎಂ ಗಳ ಚಾಲ್ತಿಯಲ್ಲಿರುವ ಕಾರ್ಯಕ್ರಮಗಳಿಗೆ ಕೂಡ ಪ್ರತಿಷ್ಠಾನ ತನ್ನ ಬೆಂಬಲ ನೀಡುತ್ತದೆ.

**ಮುಖ್ಯ ಪ್ರತಿಯೆಗಳು :**

1. ರಾಜ್ಯ / ರಾಷ್ಟ್ರ ಎಂ ಎಸ್ ಎಂ ಸಮುದಾಯ ಆಧಾರಿತ ಸಂಸ್ಥೆ ಕಾರ್ಯಕ್ರಮ ಅಭಿವೃದ್ಧಿ ಪ್ರತಿಷ್ಠಾನ ಅಭಿವೃದ್ಧಿ ಪಡಿಸಿರುವ ಚೌಕಟ್ಟುಗಳು ಮತ್ತು ಸಾಮಾಗ್ರಿಗಳನ್ನು ಬಳಸಿ ಪ್ರತಿಷ್ಠಾನವು ಹೊಸ ಅಥವಾ ಪ್ರಸ್ತುತ ಇರುವ ರಾಜ್ಯ ಅಥವಾ ರಾಷ್ಟ್ರ ಸಂಗಾತಿ ಸಂಸ್ಥೆಗಳು ಎಂ ಎಸ್ ಎಂ ನೇತೃತ್ವದ ಸಮುದಾಯ. ಆಧರಿತ ಸಂಸ್ಥೆ ಕಾರ್ಯಕ್ರಮಗಳ ಅಭಿವೃದ್ಧಿ ಮತ್ತು ಅಗತ್ಯಗಳ ಮಾಪನ ಕೈಗೆತ್ತಿಕೊಳ್ಳಲು ತರಬೇತಿ ಹಾಗು ಬೆಂಬಲ ಒದಗಿಸುತ್ತದೆ.

2. ರಾಜ್ಯ / ರಾಷ್ಟ್ರ ಸ್ಥಳಿಯ ಎಂ ಎಸ್ ಎಂ ಸಮುದಾಯ ಆಧರಿತ ಸಂಸ್ಥೆ ಕಾರ್ಯಕ್ರಮ ಅಭಿವೃದ್ಧಿಗೆ ಬೆಂಬಲ ರಾಜ್ಯ ಮಟ್ಟದ ಎಂ ಎಸ್ ಎಂ ಸಮುದಾಯ ಆಧರಿತ ಸಂಸ್ಥೆ ಕಾರ್ಯಕ್ರಮಗಳ ನಿರ್ಮಾಣದ ಮೇಲೆ, ಈ ಸಮುದಾಯ ಆಧರಿತ ಸಂಸ್ಥೆಗಳ ತಮ್ಮ ಪ್ರದೇಶದಲ್ಲಿ ಎಂ ಎಸ್ ಎಂ ನೇತೃತ್ವದ ಸಮುದಾಯ ಆಧರಿತ ಸಂಸ್ಥೆ ಕಾರ್ಯಕ್ರಮಗಳನ್ನು ಎಲ್ಲೆಡೆ ಅಭಿವೃದ್ಧಿ ಪಡಿಸಲು ಪ್ರತಿಷ್ಠಾನ ತರಬೇತಿ ಮತ್ತು ಬೆಂಬಲ ನೀಡುತ್ತದೆ.

3. ಪ್ರತಿಪಾದನೆ ಮತ್ತು ನೀತಿ ಅಭಿವೃದ್ಧಿ ಹಾಗು ನಿರಂತರ ಬೆಂಬಲ ಸೂಕ್ತ ಪ್ರತಿಪಾದನೆ ಮತ್ತು ನೀತಿ ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ. ಎಂ ಎಸ್ ಎಂ ಸಮುದಾಯ ಆಧರಿತ ಸಂಸ್ಥೆ ಕಾರ್ಯಕ್ರಮಗಳಿಗೆ ಪ್ರತಿಷ್ಠಾನ ತನ್ನ ಅಧೀನ ಬೆಂಬಲ ಸೇವೆಗಳನ್ನು ಒದಗಿಸುತ್ತದೆ. ಈ ಸೇವೆಗೂ ತರಬೇತಿ, ನಿಗಾ ಮತ್ತು ಮೌಲ್ಯ ಮಾಪನ ಸೇವೆ, ಕಾರ್ಯಕ್ರಮ ಸಂಪನ್ಮೊಲಗಳ ಅಭಿವೃದ್ಧಿಗೆ ಸಹಾಯ ಮತ್ತು ಸಂಘಟನಾತ್ಮಕ ಅಭಿವೃದ್ಧಿ ಬೆಂಬಲವನ್ನು ಒಳಗೊಂಡಿದೆ.

**ಮುಖ್ಯ ಸಾಧನಗಳು :**

ನಾಜ್ ಪ್ರತಿಷ್ಠಾನವು ಎಂ ಎಸ್ ಎಂ ಸಮುದಾಯ ಆಧರಿತ ಸಂಸ್ಥೆಗಳ ಅಭಿವೃದ್ಧಿಗೆ ಹಲವು ರೀತಿಯ ಸಮಗ್ರ ಸಾಧನಗಳನ್ನು ಅಭಿವೃದ್ಧಿ ಪಡಿಸಿದೆ. ಅವುಗಳು :

- ಎಂ ಎಸ್ ಎಂ ಸಮುದಾಯ ಆಧರಿತ ಸಂಸ್ಥೆಗಳಿಗೆ ಅಗತ್ಯವಾದ ತರಬೇತಿ ಕೈಪಿಡಿಗಳು, ಮಾರ್ಗ ದರ್ಶಿ ಸೂತ್ರಗಳು, ಕಿರುಹೊತ್ತಿಗೆಗಳು ನಿಗಾವಹಿಸುವಿಕೆ ಮತ್ತು ಮೌಲ್ಯಮಾಪನ ಪದ್ಧತಿ.

- ಎಂ ಎಸ್ ಎಂ ಸಮುದಾಯ ಆಧರಿತ ಸಂಸ್ಥೆ ಕಾರ್ಯಕ್ರಮಗಳಿಗೆ ಮಾದರಿ ವರ್ತನೆ ಬದಲಾವಣೆ ಸಂವಹನ ಸಂಪನ್ಮೂಲಗಳು.

**ಅಭಿವೃದ್ಧಿಯ ಹಂತದಲ್ಲಿರುವ ಕೆಲಸ :**

- ನಿಗಾ ಮತ್ತು ಮೌಲ್ಯ ಮಾಪನ ಪದ್ಧತಿಯ ವಿಸ್ತರಿತ ಮತ್ತು ಕಂಪ್ಯೂಟರೀಕೃತ ಆವೃತಿ.
- ವಿವಿಧ ಭಾಷೆಗಳಲ್ಲಿ ನಾಜ್ ಅಂತಾರಾಷ್ಟ್ರೀಯ ಪ್ರತಿಷ್ಠಾನ ಎಂ ಎಸ್ ಎಂ ಸಮುದಾಯ ಆಧರಿತ ಸಂಸ್ಥೆ ಅಭಿವೃದ್ಧಿ ಸಾಧನ ಕಿಟ್.
- ಗುದ ಸಂಭೋಗ ರವಾನಿತ ಸೋಂಕುಗಳ ಪಟ್ಟಿ
- ಪ್ರತಿಪಾದನೆ ಸಾಧನೆ ಕಿಟ್.

**ಮಾದರಿಯ ಸಾರಾಂಶ :**

ಮಾದರಿಯಲ್ಲಿ ಬಳಸಲಾಗಿರುವ ಸಾಧಕ ಅಂಶಗಳು, ಅವುಗಳಿಂದಾಗುವ ಪರಿಣಾಮ, ಪ್ರಕ್ರಿಯೆಗಳು ಮತ್ತು ಚಟುವಟಿಕೆಗಳು. ಅವುಗಳ ಬಗ್ಗೆ ಚಿತ್ರ ಸಹಿತ ಮುಂದಿನ ಪುಟದಲ್ಲಿ ವಿವರಿಸಲಾಗಿದೆ.

**ಪದಗಳು :**

| | | |
|---|---|---|
| ಏಡ್ಸ್ | - | ಅಕ್ವೈಯರ್ಡ್ ಇಮ್ಯುನ್ ಡೆಫಿಷಿಯೆನ್ಸಿ ಸಿಂಡ್ರೋಮ್ (ರೋಗಗಳ ಕೂಟ ಲಕ್ಷಣಗಳು) |
| ಎ ಆರ್ ವಿ | - | ಆಂಟಿರೆಟ್ರೊ ವೈರಲ್ (ಏಡ್ಸ್ ವೈರಾಣು ಪ್ರತಿರೋಧಕ) |
| ಬಿ ಸಿ ಸಿ | - | ಬಿಹೇವಿಯರ್ ಚೇಂಜ್ ಕಮ್ಯುನಿಕೇಷನ್ (ವರ್ತನೆ ಬದಲಾವಣೆ ಸಂವಹನ) |
| ಸಿ ಬಿ ಒ | - | ಕಮ್ಯುನಿಟಿ ಬೇಸಡ್ ಆರ್ಗನೈಸೇಷನ್ (ಸಮುದಾಯ ಆಧರಿತ ಸಂಸ್ಥೆ) |
| ಐ ಡಿ ಯು | - | ಇಂಜೆಕ್ಟಿಂಗ್ ಡ್ರಗ್ ಯುಸರ್ (ಮಾದಕ ದ್ರವ್ಯ ವ್ಯಸನಿ) |
| ಐ ಇ ಸಿ | - | ಇನ್ ಫರ್ಮೇಷನ್ (ಮಾಹಿತಿ), ಎಜುಕೇಶನ್ (ಶಿಕ್ಷಣ) ಮತ್ತು ಕಮ್ಯುನಿಕೇಶನ್ (ಸಂವಹನ) |
| ಎಚ್ ಐ ವಿ | - | ಹ್ಯುಮನ್ ಇಮ್ಯುನ್ ಡೆಫಿಷಿಯೆನ್ಸಿ ವೈರಸ್ (ದೇಹ ಸಂರಕ್ಷಕವ್ಯವಸ್ಥೆ ನಾಶಕ ವೈರಾಣು) |
| ಎಂ ಎಸ್ ಎಂ | - | ಮೇಲ್ಸ್ ಹೂ ಹ್ಯಾವ್ ಸೆಕ್ಸ್ ವಿತ್ ಮೇಲ್ಸ್ (ಪುರುಷ - ಪುರುಷ ಲೈಂಗಿಕತೆ) |
| ಎಂ ಎಸ್ ಡಬ್ಲ್ಯು | - | ಮೇಲ್ ಸೆಕ್ಸ್ ವರ್ಕರ್ (ಪುರುಷ ಲೈಂಗಿಕ ಕೂಲಿ) |
| ಎನ್ ಜಿ ಒ | - | ನಾನ್‌ಗೌರ್ವನಮೆಂಟಲ್ ಆರ್ಗನೈಸೇಶನ್ (ಸರ್ಕಾರೇತರ ಸಂಸ್ಥೆ) |
| ಎನ್ ಎಫ್ ಐ | - | ನಾಜ್ ಫೌಂಡೇಶನ್ ಇಂಟರ್ ನ್ಯಾಷನಲ್ (ನಾಜ್ ಅಂತಾರಾಷ್ಟ್ರೀಯ ಪ್ರತಿಷ್ಠಾನ) |
| ಎಸ್ ಟಿ ಡಿ | - | ಸೆಕ್ಷುಯಲಿ ಟ್ರಾನ್ಸ್‌ಮಿಟೆಡ್ ಡಿಸೀಸ್ (ಲೈಂಗಿಕವಾಗಿ ಹರಡುವ ರೋಗಗಳು) |
| ಎಸ್ ಟಿ ಐ | - | ಸೆಕ್ಷುಯಲಿ ಟ್ರಾನ್ಸ್‌ಮಿಟೆಡ್ ಇನ್‌ಫೆಕ್ಷನ್ (ಲೈಂಗಿಕವಾಗಿ ಹರಡುವ ಸೋಂಕುಗಳು) |
| ಯು ಎನ್ ಏಡ್ಸ್ | - | ಯುನೈಟೆಡ್ ನೇಷನೆಲ್ ಪ್ರೊಗ್ರಾಂ ಆನ್ ಏಡ್ಸ್ (ಏಡ್ಸ್ ಕುರಿತ ವಿಶ್ವಸಂಸ್ಥೆ ಕಾರ್ಯಕ್ರಮ) |

**ಆಕರಗ್ರಂಥಗಳು :**


- ದಿ ವರ್ಕರ್ಸ್ ಹ್ಯಾಂಡ್ ಬುಕ್ : ದಿ ಸೆಕ್ಸ್ ವರ್ಕರ್ಸ್ ಔಟ್‌ರೀಚ್ ಪ್ರಾಜೆಕ್ಟ್, ಆಸ್ಟ್ರೇಲಿಯ, 1992.
- ದಿ ಅನ್ ಸೆನ್ಸರ್ಡ್ ಗೈಡ್ ಟು ಸೆಕ್ಷುಯಲ್ ಹೆಲ್ತ್, ಹೆಲ್‌ನ್ ನಾಕ್ಸ್, ನಾಕ್ಸ್ ಪಬ್ಲಿಷಂಗ್, ಯುಕೆ, 1995.
- ಮೇಕಿಂಗ್ ಸೆಕ್ಸ್ ವರ್ಕ್ ಸೇಫ್, ನೆಟ್‌ವರ್ಕ್ ಆಫ್ ಸೆಕ್ಸ್ ವರ್ಕರ್ಸ್ ಪ್ರಾಜೆಕ್ಟ್, ಯುಕೆ, 1997.
- ಎಲಿಸಿ ಆಫ್ ಸೆಕ್ಷುಯಲಿ ಟ್ರಾನ್ಸ್‌ಮಿಟಡ ಡಿಸೀಸ್, ಎಡಿಟೆಡ್ ಟೈ ಮೈಕೊ ಅಡ್ಮೆರ್, ಬಿ ಎಂ ಜೆ, ಯುಕೆ, 1995.
- ಎಟಿಸಿ ಆಫ್ ಏಡ್ಸ್, ಎಡಿಟೆಡ್ ಟೈ ಮೈರೇಲ್ ಅಡ್ಮರ್, ಬಿ ಎಂ ಜೆ, 1997.
- ವರ್ಕಿಂಗ್ ವಿತ್ ಅನ್‌ಸರ್ಟೆನಿಟಿ, ಹಿಲರಿ ಡಿಕ್ಸನ ಅಂಡ್ ಪೀಟರ್ ಗೊರ್ಡನ್, ಎಫ್ ಪಿ ಎ ಎಜುಕೇಶನ ಯುನಿಟ್, ಯುಕೆ, 1987.
- ವಾಸೆಕ್ಸ್ ಗೇಮೆನ್ಸ್ ಹೆಲ್ತ್ ಫೋರಂ, ಯುಕೆ ಫಾರ್ ಎಸ್ ಟಿ ಡಿ ಟೆಕ್ಸ್ಟ್.
- ಎಸ್ ಟಿ ಡಿ / ಏಡ್ಸ್ ಪೀರ್ ಎಜುಕೇಟರ್ ಟ್ರೇನಿಂಗ್ ಮಾನ್ಯುಯಲ್, ನ್ಯಾಷನಲ್ ಏಡ್ಸ್ ಕಂಟ್ರೋಲ್ ಪ್ರೊಗ್ರಾಂ, ತಾಂಜಾನಿಯ 1992.
- ಯು ಎನ್ ಡಿ ಪಿ : ಎಚ್ ಐ ವಿ / ಏಡ್ಸ್ ಪ್ರಾಜೆಕ್ಟ್ ಪ್ಲಾನಿಂಗ್ ಮಾನ್ಯುಯಲ್.
- ಡಿಪಾರ್ಟಮೆಂಟ್ ಆಫ್ ಇಂಟರ್ ನ್ಯಾಷನಲ್ ಡೆವೆಲಪ್‌ಮೆಂಟ್, ಯುಕೆ, ಪ್ರಾಜೆಕ್ಟ್ ಲಾಜಿಕಲ್ ಫ್ರೇಂ ವರ್ಕ್.
- ಯು ಎನ್ ಏಡ್ಸ್ : ಪ್ಲಾನಿಂಗ್ ಅಂಡ್ ಇಂಪ್ಲಿಮೆಂಟೆಷನ್ ಆಫ್ ಟಾರ್ಗೆಟೆಡ್ ಇಂಟರ್‌ವೆನ್‌ಷನ್ಸ್ - ಪಾರ್ಟಿಸಿಪೆಂಟ್ಸ್ ಗೈಡ್ (ಡ್ರಾಫ್ಟ್)


ಈ ಸಂಪನ್ಮೂಲ ಅಭಿವೃದ್ಧಿ ಮತ್ತು ತಯಾರಿಕೆಗೆ ತಮ್ಮ ಬೆಂಬಲ ನೀಡಿದ ಯುಎನ್ ಏಡ್ಸ್ ಮತ್ತು ಕಾಲ್ಲೆ ಅಲ್ಮೆಡಲ್ ಸಹಭಾಗಿತ್ವ ಘಟಕಕ್ಕೆ ನಮ್ಮ ಕೃತಜ್ಞತೆಗಳು.